MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER · VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 264 | ಮಂಗಳವಾರ : 05-08-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 264 | TUESDAY : 05-08-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಸಂಪುಟ ಸಭೆಯಲ್ಲಿ ವರದಿ ಚರ್ಚೆ



**ಬೆಂಗಳೂರು, ಆ.04–** ಒಳಮೀಸಲಾತಿ ಕುರಿತಂತೆ ನಿವೃತ್ತ ನಾಗಮೋಹನ್ ದಾಸ್ ಆಯೋಗ ಸಲ್ಲಿಸಿರುವ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳುವುದಾಗಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ವಿಧಾನಸೌಧದಲ್ಲಿಂದು ನಾಗಮೋಹನ್ ದಾಸ್ ಆಯೋಗದಿಂದ ವರದಿ ಸ್ವೀಕರಿಸಿದ ಬಳಿಕ ಸುದ್ಧಿಗಾರರೊಂದಿಗೆ ಮಾತನಾಡಿದ ಅವರು ಈ ತಿಂಗಳ 7 ರಂದು ಸಚಿವ ಸಂಪುಟ ಸಭೆ ನಡೆಯಲಿದ್ದು, ಈ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಸಂಬಂಧ ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಏಕಸದಸ್ಯ ಆಯೋಗ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಿತು. ಸಮೀಕ್ಷೆಯ ದತ್ತಾಂಶ ಮತ್ತು ಅನುಬಂಧಗಳು ಸೇರಿದಂತೆ 1,765 ಪುಟಗಳು ಮತ್ತು 6 ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಸಲ್ಲಿಸಿತು.

ರಾಜ್ಯಾದ್ಯಂತ ಮೇ 5 ರಿಂದ ಜುಲೈ 6ರವರೆಗೆ ನಡೆದ ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮತ್ತು ಸರ್ಕಾರದ ವಿವಿಧ ಇಲಾಖೆ, ನಿಗಮ- ಮಂಡಳಿಗಳಿಂದ ಸಂಗ್ರಹಿಸಿದ ದತ್ತಾಂಶವನ್ನು ವಿಶ್ಲೇಷಿಸಿ ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನದಂತೆ ಪರಿಶಿಷ್ಟ ಜಾತಿ ಒಳ ಜಾತಿಗಳನ್ನು ವರ್ಗೀಕರಿಸಿ ಲಭ್ಯವಿರುವ ಮೀಸಲಾತಿಯನ್ನು ಆಯೋಗ ಹಂಚಿದೆ.

ವರದಿ ಸಲ್ಲಿಸಿದ ಬಳಿಕ ಸುದ್ಧಿಗಾರರೊಂದಿಗೆ ಮಾತನಾಡಿದ ನಾಗಮೋಹನ್ ದಾಸ್ ಒಳಮೀಸಲಾತಿಗೆ ಮತ್ತಷ್ಟು ದತ್ತಾಂಶ ಬೇಕಾಗಿತ್ತು. ಹೀಗಾಗಿ ರಾಜ್ಯ ಸರ್ಕಾರ ಹೊಸ ಸಮೀಕ್ಷೆಗೆ ಅವಕಾಶ ಕಲ್ಪಿಸಿತ್ತು. ಈ ಹಿನ್ನೆಲೆಯಲ್ಲಿ 60 ದಿನಗಳ ಈ ಸಮೀಕ್ಷೆಯಲ್ಲಿ ಒಟ್ಟು 27 ಲಕ್ಷ ಕುಟುಂಬಗಳು ಭಾಗವಹಿಸಿದ್ದವು. ಇದನ್ನು ಕುಲೂಂಕಶವಾಗಿ ಪರಿಶೀಲಿಸಿ ವರದಿಯ ದತ್ತಾಂಶ ನೀಡಿದ್ದೇವೆ ಎಂದು ಹೇಳಿದರು.

ಒಳಮೀಸಲಾತಿ ವರದಿ ಸರ್ಕಾರದ ಆಸ್ತಿಯಾಗಿದೆ. ಅದರಲ್ಲಿ ಏನಿದೆ? ಒಪ್ಪುವುದು ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯವಾಗಿದೆ ಎಂದರು. ವರದಿ ಸಲ್ಲಿಕೆ ವೇಳೆ ಸಚಿವರಾದ ಜಿ. ಪರಮೇಶ್ವರ್, ಹೆಚ್.ಸಿ. ಮಹದೇವಪ್ಪ, ಕೆ.ಎಚ್. ಮುನಿಯಪ್ಪ, ಶಿವರಾಜ ತಂಗಡಿ, ಆರ್.ಬಿ ತಿಮ್ಮಾಪು, ಪ್ರಿಯಾಂಕ ಖರ್ಗೆ ಮುತ್ತಿತರರು**(2ನೇಪುಟಕ್ಕೆ)**

## ಬಸ್ಸಿನಲ್ಲಿ ಪ್ರಯಾಣಿಸುವಾಗ ಬ್ಯಾಗಿನಲ್ಲಿದ್ದ 12 ತೊಲೆ ಬಂಗಾರದಾಭರಣ ಕಳವು

**ಯುವ ಮಾರ್ಗ ಸುದ್ದಿ**

**ಸಿರವಾರ, ಆ.04–**ಸಿರವಾರದಿಂದ ರಾಯಚೂರಿಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಬ್ಯಾಗನಲ್ಲಿದ್ದ 12 ತೊಲೆ ಬಂಗಾರದಾಭರಣವನ್ನು ಅಪರಿಚಿತ ಕಳ್ಳರು ಕದ್ದು ಪರಾರಿಯಾಗಿರುವ ಘಟನೆ ತಡವಾಗಿ ಬೆಲಕಿಗೆ ಬಂದಿದೆ.

ಸಿರವಾರ ತಾಲೂಕಿನ ಜಾಲಾಪೂರು ಕ್ಯಾಂಪಿನ ಮಹಿಳೆ ಧನಲಕ್ಷ್ಮೀ ಗಂಡ ಸತ್ಯನಾರಾಯಣ ಅವರು ಜು.30 ರಂದು ಹೈದ್ರಾಬಾದಗೆ ಸಂಬಂಧಿಕರ ಕಾರ್ಯಕ್ರಮವೊಂದಕ್ಕೆ ಹೋಗುತ್ತಿದ್ದರು 12 ತೊಲೆ (120 ಗ್ರಾಂ) ಬಂಗಾರದಾಭರಣಗಳನ್ನು ಕಾರ್ಯಕ್ರಮದಲ್ಲಿ ಹಾಕಿಕೊಳ್ಳಬೇಕೆಂದು ಆಭರಣಗಳನ್ನು ಬ್ಯಾಗನಲ್ಲಿ ಇಟ್ಟಿದ್ದರು ಎಂದು ಹೇಳಲಾಗುತ್ತಿದೆ ಅಂದು ಮಧ್ಯಾಹ್ನ 1 ಗಂಟೆ 10 ನಿಮಿಷ ಸಮಯದಲ್ಲಿ

ಕಾಲ್ಪನಿಕ ಚಿತ್ರ




ಸಿರವಾರ ಬಸ್ ನಿಲ್ದಾಣದಿಂದ ಸರ್ಕಾರಿ ಸಾರಿಗೆ ಬಸ್ಸಿನಲ್ಲಿ ರಾಯಚೂರಿಗೆ ಹೋಗಿದ್ದು ರಾಯಚೂರು ಬಸ್ ನಿಲ್ದಾಣದಲ್ಲಿ ಇಳಿದು ಬ್ಯಾಗನ್ನು ನೋಡಿದಾಗ ತೆಗೆದಿತ್ತು ನಂತರ ಗಾಬರಿಯಿಂದ ಬ್ಯಾಗನಲ್ಲಿ ಬಂಗಾರದಾಭರಣ ನೋಡಿದಾಗ ಇರಲಿಲ್ಲವೆಂದು ಮಹಿಳೆ ಪೊಲೀಸ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಈ ಕುರಿತು ಸಿರವಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಕಲಾಗಿದ್ದು ಸಿರವಾರ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ವಿಧಾನಸಭಾ ಚುನಾವಣೆಯಲ್ಲಿ ಎಂಎಲ್ಸಿ ಚೆಂಡಿನ ಜೊತೆ ಕೈಜೋಡಿಸಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿದರು : ಡಿ.ಎಸ್ ಹೂಲಗೇರಿ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಆ.04–**2023ರ ವಿಧಾನ ಸಭಾ ಚುನಾವಣೆಯಲ್ಲಿ ವಿಧಾನ ಪರಿಷತ್ ಸದಸ್ಯ ಶರಣಗೌಡ ಬಯ್ಯಾಪೂರ ಅವರು ಚೆಂಡಿನ ಜೊತೆ ಕೈಜೋಡಿಸಿ ಕಾಂಗ್ರೆಸ್ ಸೋಲಿಗೆ ಕಾರಣರಾಗಿರುವ ನಿಮ್ಮ ಬಗ್ಗೆ ಕ್ಷೇತ್ರದ ಜನತೆಗೇ ಗೊತ್ತಿರುವ ವಿಷಯ. ಕೊಟ್ಟ ಜವಾಬ್ದಾರಿಯನ್ನು ನೀಯತ್ತಾಗಿ ನಿಭಾಯಿಸಿ. ದ್ವೇಷ ರಾಜಕಾರಣ ಮಾಡಬೇಡಿ. ಜನರು ಎಲ್ಲವನ್ನೂ ವೀಕ್ಷಿಸುತ್ತಿದ್ದಾರೆ. ನಾನು ಪಕ್ಷಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಮಾಜಿ ಶಾಸಕ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಡಿ.ಎಸ್ ಹೂಲಗೇರಿ ಹೇಳಿದರು.

ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಎಂಎಲ್‌ಸಿಯವರೇ ಪಕ್ಷದಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಇದಕ್ಕೆ




ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರು ತಲೆಕೆಡಿಸಿಕೊಳ್ಳುವ ಅಗತ್ಯತೆ ಇಲ್ಲ. ಕೆಪಿಸಿಸಿ ರಾಜ್ಯಾಧ್ಯಕ್ಷರೇ ಗೋವಿಂದ ನಾಯಕರನ್ನು ಬ್ಲಾಕ್ ಅದ್ಯಕ್ಷರನ್ನಾಗಿ ನೇಮಿಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಗ್ರಾಮೀಣ ಮಟ್ಟದಲ್ಲಿ ಗಟ್ಟಿಗೊಳಿಸಿದ್ದೇನೆ. ಇಲ್ಲದಿದ್ದರೆ ಲೋಕಸಭೆ ಚುನಾವಣೆಯಲ್ಲಿ ಲಿಂಗಸುಗೂರು ಕ್ಷೇತ್ರ ಜಿಲ್ಲೆಯಲ್ಲಿಯೇ ಹೆಚ್ಚಿನ ಲೀಡ್ ಕೊಡಲು ಹೇಗೆ ಸಾಧ್ಯವಾಗುತ್ತಿತ್ತು. ಜನರು ಕೊಟ್ಟ ಅಧಿಕಾರವನ್ನು ಸಮರ್ಪಕವಾಗಿ ಜನಸೇವೆಗೆ ಮುಡಿಪಾಗಿಡಿ." ಎಂದು ಹರಿಹಾಯ್ದರು.

ಮೀಸಲು ಕ್ಷೇತ್ರದಲ್ಲಿ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರೊಟ್ಟಿಗೆ ಎಲ್ಲಾ ಸಮುದಾಯದವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನೀಯತ್ತಾಗಿ ಕೆಲಸ ಮಾಡಿದವರು ನಾವು. ನಾವೇ ಪರಿಷತ್ ಚುನಾವಣೆಯಲ್ಲಿ ನೀಯತ್ತಾಗಿ ಕೆಲಸ **(2ನೇಪುಟಕ್ಕೆ)**

## ಹಿರೇಕೊಟ್ನೇಕಲ್: ನಂ.76 ಕಾಲುವೆಗೆ ನಿಯಂತ್ರಣ ಬಿಂದು ನಿರ್ಮಿಸಲು ಮನವಿ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.04–** ತಾಲ್ಲೂಕಿನ ಹಿರೇಕೊಟ್ನೇಕಲ್‌ನಲ್ಲಿರುವ ನೀರಾವರಿ ಇಲಾಖೆ ಕಚೇರಿಯಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನೀರಾವರಿ ಇಲಾಖೆಯ ಎ.ಇ.ಇ. ವಿಜಯಲಕ್ಷ್ಮೀ ಅವರಿಗೆ ಮನವಿ ಸಲ್ಲಿಸಲಾಯಿತು. ನಕ್ಕುಂದಿ ಗ್ರಾಮದ ಬಳಿ ಹಾದುಹೋಗುವ ಡಿಸ್ಟಿಬ್ಯೂಟರ್ ನಂ.76/3/1 ರ ಕರೇಗುಡ್ಡ ಪೈಪ್‌ಲೈನ್ ಹತ್ತಿರ ಕಂಟ್ರೋಲ್ ಪಾಯಿಂಟ್ ನಿರ್ಮಿಸುವಂತೆ ಮನವಿಯಲ್ಲಿ ಒತ್ತಾಯಿಸ ಲಾಗಿದೆ.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಮುಖಂಡ ಗಂಗಾಧರ ಬಾಗಲವಾಡ ಮಾತನಾಡಿ, ಈ ಸಂಬಂಧ ಅನೇಕ ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದಾಗಿ ಈ ಭಾಗದಲ್ಲಿ ಸುಮಾರು 600 ಎಕರೆ ಜಮೀನಿಗೆ ನೀರು ಸಿಗದೆ ರೈತರು



ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದರು. ತಕ್ಷಣವೇ ನಿಯಂತ್ರಣ ಬಿಂದು ನಿರ್ಮಿಸಿ, 400 ಮೀಟರ್‌ವರೆಗೆ ಡ್ರಾಪ್ ನಿರ್ಮಾಣ ಮಾಡುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಎ.ಇ.ಇ. ವಿಜಯಲಕ್ಷ್ಮೀ ಅವರು, ಡಿಸ್ಟಿಬ್ಯೂಟರ್ ನಂ.76/3/1 ರ ಕರೇಗುಡ್ಡ ಪೈಪ್‌ಲೈನ್ ಬಳಿ ಇರುವ ಸ್ಥಳವನ್ನು ಪರಿಶೀಲಿಸಿ, ಅಧೀಕ್ಷಕ ಅಭಿಯಂತರರಿಗೆ ವರದಿ ಸಲ್ಲಿಸಲಾಗುವುದು. ಅನುಮತಿ ಪಡೆದ ನಂತರ ಎಂಟು ದಿನಗಳಲ್ಲಿ ವಾರಬಂಧಿ ಬರುವ ಮುನ್ನ ನಿಯಂತ್ರಣ ಬಿಂದು ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸುಭಾಷ ಚಂದ್ರಪ್ಪ, ಮಾರೆಪ್ಪ ನಕ್ಕುಂದಿ,ಮೌನೇಶಕೋರಿ,**(2ನೇಪುಟಕ್ಕೆ)**

## ವೈಯಕ್ತಿಕ ರಾಜಕೀಯ ಮಾಡಬಾರದು : ಶರಣಗೌಡ ಪಾಟೀಲ್ ಬಯ್ಯಾಪೂರ



**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಆ.04–** ರಾಜಕೀಯ ಕ್ಷೇತ್ರದಲ್ಲಿ ತಮ್ಮ ವ್ಯಯಕ್ತಿಕ ರಾಜಕಾರಣ ಮಾಡಬಾರದು, ರಾಜಕಾರಣದಲ್ಲಿ ಪ್ರಬುದ್ದತೆ ಇರಬೇಕು ಎಂದು ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ ಹೇಳಿದರು.

ಪಟ್ಟಣದ ವಿಧಾನ ಪರಿಷತ್ ಸದಸ್ಯರ ಕಾರ್ಯಾಲಯದಲ್ಲಿ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಹಾಗೂ ಮಹಿಳಾ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಲಿಂಗಸುಗೂರು ಕ್ಷೇತ್ರದಲ್ಲಿ ಪಕ್ಷ ಸಂಘಟನೆಯಲ್ಲಿ ಎಲ್ಲಾರೂ ಒಗ್ಗೂಡಿಸಿ ಕೆಲಸ ಮಾಡಬೇಕು, ಮುಂದಿನ ದಿನದಲ್ಲಿ ತಾಲೂಕಿನ ಎಲ್ಲಾ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದಲ್ಲಿ ಇರುವ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನ ಪಡುವೇ ಎಂದರು.

ಲಿಂಗಸುಗೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಕುಸಿಯುತ್ತದೆ ಎಂದು ಸಿಎಂ, ಡಿಸಿಎಂ ಹೇಳಿದರು ಆಗ ಶರಣಗೌಡ ಬಯ್ಯಾಪೂರ ಅವರೇ ನಿಮ್ಮ ಕ್ಷೇತ್ರದಲ್ಲಿ ಪಕ್ಷ ಹಿನ್ನಡೆ ಯಾಗುತ್ತದೆ ಅದನ್ನು ನೀವು ಜವಾಬ್ದಾರಿ ತಗೆದುಕೊಂಡು ಪಕ್ಷವನ್ನು ಬಲಪಡಿಸಿಬೇಕು ಎಂದು ಆದೇಶ ಮಾಡಿದರು. ಅವರ ಮಾರ್ಗದರ್ಶನದಲ್ಲಿ ಪಕ್ಷವನ್ನು ಬಲ ಪಡಿಸಲು ಸಿದ್ದನಾಗಿದ್ದನೆ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಪಾಮಯ್ಯ ಮುರಾರಿ ಮಾತನಾಡಿ, ಕಾಂಗ್ರೆಸ್ ಪಕ್ಷ ಬಡವರ ಪಕ್ಷವಾಗಿದೆ ಕಾಂಗ್ರೆಸ್ ಶಾಶ್ವತವಾಗಿ ಇರುತ್ತದೆ, ಪಕ್ಷಕ್ಕೆ ಸಾಕಷ್ಟು ಗಣ್ಯರು ದುಡಿದಿದ್ದಾರೆ, ಲಿಂಗಸು ಗೂರುಲ್ಲಿ ಪಕ್ಷ ಸಂಘಟನೆ ಮಾಡಬೇಕಿದೆ, ಕಾಂಗ್ರೆಸ್ ಸೋಲುವುದಕ್ಕೆ ಯಾರು ಕಾರಣ ಅನ್ನದು ಅರ್ಥ ಮಾಡಿಕೊಳ್ಳಬೇಕಿದೆ, ವಿಧಾನ ಪರಿಷತ್ ಸದಸ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಮುಂದುವರೆದಿದೆ, ಕಾಂಗ್ರೆಸ್ ಪಕ್ಷ ದುಡಿದ ರವರಿಗೆ ಸ್ಥಾನಮಾನ ನೀಡುತ್ತದೆ ಅದಕ್ಕೆ ಸಾಕ್ಷಿ ನಗರ ಪ್ರಾಧಿಕಾರ ಅಧ್ಯಕ್ಷರೇ ಕಾಣಬಹುದು, ಶೈಕ್ಷಣಿಕವಾಗಿ, ಕುಡಿಯುವ ನೀರು, ಕಾಲುವೆಗಳ ರೂವಾರಿ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಅವರೇ ಕಾರಣರಾಗಿದ್ದಾರೆ, ಸಾರ್ವಜನಿಕರಿಗೆ ಸರ್ಕಾರದ ಎಲ್ಲಾ ಸೌಲಭ್ಯ ತಲುವಂತೆ ನಾವು ಎಲ್ಲಾರೂ ಕೆಲಸ ಮಾಡಬೇಕಾಗಿದೆ, ಕಾಂಗ್ರೆಸ್ ಪಕ್ಷದಲ್ಲಿ ಮಹಿಳೆಯರಿಗೆ ಸೂಕ್ತ ಸ್ಥಾನಮಾನ ನೀಡುತ್ತ ಬಂದಿದೆ ಎಂದರು.

ಈ ಸಂದರ್ಭದಲ್ಲಿ ನಗರ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಪಾಟೀ ಲ್, ಡಿ.ಜಿ ಗುರಿಕಾರ, ಗುಂಡಪ್ಪ ನಾಯಕ, ಪ್ರಮೋದ್ ಕುಲಕರ್ಣಿ, ಅಮರೇಶ ನಾಡಗೌಡ, ಅನೀಷ್ ಪಾಷ,**(2ನೇಪುಟಕ್ಕೆ)**

## ಮಾನ್ವಿ ತಾಲೂಕು ಚುಟುಕು ಸಾಹಿತ್ಯ ಪರಿಷತ್ತು ಪದಗ್ರಹಣ ಕಾರ್ಯಕ್ರಮ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.4–**ಪಟ್ಟಣದ ತಾಲೂಕು ಪಂಚಾಯಿತಿ ಭವನದಲ್ಲಿ ನಡೆದ ಚುಟುಕು ಸಾಹಿತ್ಯ ಪರಿಷತ್ತು ಮಾನ್ವಿ ತಾ.ಘಟಕದ ಕಾರ್ಯಚಟುವಟಿಕೆಗಳ ಉದ್ಘಾಟನೆ ಹಾಗೂ ಪದಗ್ರಹಣ ಕಾರ್ಯಕ್ರಮವನ್ನು ಹಿರಿಯ ಸಾಹಿತಿ,ನಿಕಟ ಪೂರ್ವ ಕ.ಸಾ.ಪ. ಜಿಲ್ಲಾಧ್ಯಕ್ಷರಾದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು ಉದ್ಘಾಟಿಸಿ ಮಾತನಾಡಿ ಕನ್ನಡ ಸಾಹಿತ್ಯದಲ್ಲಿ ಚುಟುಕು ಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ ಒಂದು ಕಥೆ ಹೇಳದನ್ನು ಕವಿತೆ ಹೆಳ್ಳುತ್ತದೆ, ಕವಿತೆ ಹೆಳದನ್ನು ಕೇಲವು ಸಾಲುಗಳಲ್ಲಿ ಚುಟುಕು ಹೇಳುತ್ತದೆ ಚುಟುಕುಗಳನ್ನು ಸುಲಾಭವಾಗಿ ಪ್ರತಿಯೊಬ್ಬರು ಕೂಡ ಬರೆಯಬಹುದಾದ ಸರಳ ಸಾಹಿತ್ಯಿಕ ಪ್ರಕಾರವಾಗಿದೆ. ನಮ್ಮ ಜಿಲ್ಲೆಯಲ್ಲಿ ಶರಣರು,ದಾಸರು, ಸಾಹಿತಿಗಳು ತಮ್ಮ ವಿಶೇಷವಾದ ಕೃತಿಗಳಿಂದ ನಮ್ಮ ಜಿಲ್ಲೆಯ ಸಾಹಿತ್ಯವನ್ನು ಶ್ರೀಮಂತಗೊಳ್ಳಿಸಿದ್ದಾರೆ. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆದಾಗ ಮಾತ್ರ ಹೊಸ ಪ್ರತಿಭೆಗಳು ಹೊರಹೊಮ್ಮುವುದಕ್ಕೆ ಸಾಧ್ಯವಾಗುತ್ತದೆ ಈ ನಿಟ್ಟಿನಲ್ಲಿ ತಾ. ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ಮುಂದಿನ ದಿನಗಳಲ್ಲಿ ಚುಟುಕು ಸಾಹಿತ್ಯದ ಬೆಳವಣಿಗೆಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ತಿಳಿಸಿದರು. ಸಾಹಿತಿ ಹಾಗೂ ಕಲಾವಿದರಾದ ಆನಂದ ಜೂಕುರು ಉಪನ್ಯಾಸ ನೀಡಿ ಚುಟುಕುಗಳಲ್ಲಿ ಪದಗಳು



ಕೇಲವೆ ಇದ್ದರು ಕೂಡ ಅತ್ಯ ಂತ ಮಾರ್ಮಿಕವಾಗಿರುತ್ತವೆ, ಚುಟುಕುಗಳ ಮೂಲಕ ಸಾಮಾಜಿಕ ಸಂದೇಶಗಳನ್ನು ಪರಿಣಾಮಕಾರಿಯಾಗಿ ಹೇಳುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಚುಟುಕು ಸಾಹಿತ್ಯಪರಿಷತ್ತು ಜಿಲ್ಲಾಧ್ಯಕ್ಷರಾದ ನರಸಿಂಗ್‌ರಾವ್ ಸರ್‌ಕಿಲ್ ತಾ. ಘಟಕದ ನೂತನ ಪದಾದಿಕಾರಿಗಳಿಗೆ ಪದಗ್ರಹಣ ನೆರವೇರಿಸಿದರು. ನಂತರ ಚುಟುಕು ಕವಿಗೋಷ್ಟಿಯಲ್ಲಿ ತಾಲೂಕಿನ ವಿವಿಧ ಕವಿಗಳು ತಮ್ಮ ಚುಟುಕು ಕವಿತೆಗಳನ್ನು ಪ್ರಸ್ತುತಪಡಿಸಿದರು. ಮೌನೇಶ್ ಪೋತ್ನಾಳ್,ನಿವೃತ್ತ ಪಿ.ಎಸ್.ಐ. ವೀರನಗೌಡ ಕರಡಿಗುಡ್ಡ, ಮಾಜಿ ಯೋಧರ ಸಂಘದ ಜಿಲ್ಲಾಧ್ಯಕ್ಷರಾದ ಚನ್ನರೆಡ್ಡಿ , ಸುಬಾನ್ ಬೇಗ್ ,ಹನುಮಂತ ಕೋಟೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನಿಯವಾದ ಸಾಧನೆ ತೋರಿದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ರಾಜಾ ಮಹೇಂದ್ರನಾಯಕ, ಚುಟುಕು ಸಾಹಿತ್ಯ ಪರಿಷತ್ತು ಜಿಲ್ಲಾ ಉಪಾಧ್ಯಕ್ಷರಾದ ಬಸವರಾಜ ಭೋಗಾವತಿ, ಜಿಲ್ಲಾ ಕಾರ್ಯದರ್ಶಿ ಬಸವರಾಜ ಬ್ಯಾಗವಾಟ,ತಾ.ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸುರೇಶಕುರ್ಡಿ, ಬಿಸಿಎಂ. ಅಧಿಕಾರಿ ಬಾಗಯ್ಯನಾಯಕ, ತಾ. ಗೌರವಾಧ್ಯಕ್ಷರಾದ ಮಹಾದೇವಪ್ಪ,ತಾ. ಅಧ್ಯಕ್ಷರಾದ ಮಹ್ಮದ್ ಮುಜೀಬ್ ,ಪ್ರ.ಕಾರ್ಯದರ್ಶಿ ರವಿಶರ್ಮ, ಕೋಶಾಧ್ಯಕ್ಷರಾದ ಎಂ.ಆರ್. ವೆಂಕಯ್ಯಶೆಟ್ಟಿ, ಅಂಜನೇಯ್ಯ ನಸ್ಲಾಪುರ್, ಬಸವರಾಜ ಸುಂಕೇಶ್ವರ, ಸಂಗಮೇಶ ಮುದೋಳ್, ಮೂಕಪ್ಪ ಕಟ್ಟಿಮನಿ, ಮಧುಪಾಂಡೆ, ಡಿ.ಜಿ. ಕರ್ಕಿಹಳ್ಳಿ, ಮನೋಹರ್, ಮುತ್ತಣ್ಣ, ಹನುಮಂತ ನಂದಿಹಾಳ್ ಇದ್ದರು.

## ಮೊದಲನೇಯ ಪುಟದಿಂದ

# ಸಂಪುಟ ಸಭೆಯಲ್ಲಿ ವರದಿ ಚರ್ಚೆ

ಉಪಸ್ಥಿತರಿದ್ದರು. ಒಳಮೀಸಲಾತಿ ವರ್ಗೀಕರಣಕ್ಕೆ ಜಾತಿಗಳ ಶೈಕ್ಷಣಿಕ ಹಿಂದುಳಿದಿರುವಿಕೆ ಸರ್ಕಾರ ಅಗತ್ಯ ಪ್ರಾತಿನಿಧ್ಯ ಕೊರತೆ ಸಾಮಾಜಿಕ ಹಿಂದುಳಿದಿರುವಿಕೆ ಮಾನದಂಡ ಪರಿಗಣಿಸಬೇಕೆಂದು ಸುಪ್ರೀಂಕೋರ್ಟ್ ಸೂಚನೆ ಹಿನ್ನೆಲೆಯಲ್ಲಿ ಈ ಅಂಶಗಳ ಆಧಾರದ ಮೇಲೆ ಮೀಸಲಾತಿ ಹಂಚಿಕೆ ಮಾಡಲಾಗಿದೆ ಎಂದು ಆಯೋಗ ವಿವರಿಸಿದೆ.

ಒಳಮೀಸಲಾತಿ ಆಗ್ರಹಿಸಿ ಕಾನೂನು ಮತ್ತು ಹೊರಗೆ ದಲಿತ ಸಂಘಟನೆಗಳು ಕಳೆದ 30 ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದೆ. 2024ರ ಆಗಸ್ಟ 1 ರಂದು ರವೀಂದ್ರರ್‌ಸಿಂಗ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ತೀರ್ಪು ನೀಡಿ ಉಪವರ್ಗೀಕರಣ ಮಾಡಲು ಸಂವಿಧಾನದ ಅನುಚೇತ 14ರಲ್ಲಿ ಅವಕಾಶವಿದೆ.

ಉಪವರ್ಗೀಕರಣ ಸಾಮಾಜಿಕ, ನ್ಯಾಯ ವಿಸ್ತರಣೆಯಾಗಿದೆ. ರಾಜ್ಯ ಸರ್ಕಾರಕ್ಕೆ ಒಳಮೀಸಲಾತಿ ನೀಡುವ ಅಧಿಕಾರವಿದೆ. ಉಪವರ್ಗೀಕರಣ ಮಾಡಿದರೆ ಮೀಸಲಾತಿಯನ್ನು ಅನುಭವಿಸುತ್ತಿರುವ ಯಾರನ್ನು ಹೊರಗಿಡುವುದಿಲ್ಲ. ಅಗತ್ಯ ದತ್ತಾಂಶ ಒಳಜಾತಿಗಳ ವರ್ಗೀಕರಣ ಮಾಡಬೇಕೆಂದು ತಿಳಿಸಿದೆ.

ಎಲ್ಲಾ ಬೆಳವಣಿಗೆಯ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ನಾಗಮೋಹನ್ ದಾಸ್ ನೇತೃತ್ವದಲ್ಲಿ ಆಯೋಗ ರಚಿಸಲಾಗಿತ್ತು.

ರಾಜ್ಯದಲ್ಲಿ ನಿಖರವಾದ ದತ್ತಾಂಶವಿಲ್ಲದ ಕಾರಣ ಹೊಸದಾಗಿ ಸಮೀಕ್ಷೆ ನಡೆಸಬೇಕೆಂದು 2025ರ ಮಾರ್ಚ್ 27ರಂದು ಆಯೋಗವು ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಅದೇ ದಿನ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಧ್ಯಂತರ ವರದಿಯನ್ನು ಸರ್ಕಾರ ಒಪ್ಪಿ, ಪರಿಶಿಷ್ಟ ಜಾತಿಗಳ ಸಮೀಕ್ಷೆ ನಡೆಸಲು ನಿರ್ಣಯ ಕೈಗೊಂಡಿತು.

ಆಯೋಗದ ಅಧ್ಯಕ್ಷರಾದ ಹೆಚ್.ಎನ್. ನಾಗಮೋಹನ್ ದಾಸ್ ಅವರು ಯಾವುದೇ ಸಂಭಾವನೆ ಅಥವಾ ಗೌರವಧನ ಪಡೆಯದೆ ಸಮೀಕ್ಷೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿದೆ ಎಂದು ಆಯೋಗ ಬಿಡುಗಡೆ ಮಾಡಿರುವ ಪ್ರಕಟಣೆ ತಿಳಿಸಿದೆ.

# ಹಿರೇಕೊಟ್ನೇಕಲ್: ನಂ.76 ಕಾಲುವೆಗೆ ನಿಯಂತ್ರಣ ಬಿಂದು ನಿರ್ಮಿಸಲು ಮನವಿ

ನಾಗರಾಜ ಹಿಂದಿನಮನಿ, ರಂಗಪ್ಪ ನಕ್ಕುಂದಿ, ಹನುಮಂತ ಉದ್ಬಳ್, ರವಿಪಾಟೀಲ್, ವೆಂಕಟೇಶಗೌಡ, ಉಮೇಶಗೌಡ ನಕ್ಕುಂದಿ, ಹನುಮಂತಪ್ಪ, ಎರಸ್ವಾಮಿ, ವೆಂಕಟೇಶಗೌಡ, ಸಂಗನಬಸವ, ಜಗದೀಶ ಬಾಗಲವಾಡ, ಪಂಪಾಪತಿ ನಕ್ಕುಂದಿ, ಅಂಬಯ್ಯ ನಕ್ಕುಂದಿ, ಹನುಮೇಶಬುದ್ದಿ, ಮೌನೇಶ ಬಡಿಗೇರ, ಗುಂಡಯ್ಯಸ್ವಾಮಿ, ರಂಗಪ್ಪ, ಹುಸೇನಪ್ಪ, ಹನುಮಯ್ಯ ಗೋಶಾಲ ಸೇರಿದಂತೆ ಅನೇಕರು ಹಾಜರಿದ್ದರು.

## ವಿಧಾನಸಭಾ ಚುನಾವಣೆಯಲ್ಲಿ ಎಂಎಲ್ಸಿ ಚೆಂಡಿನ ಜೊತೆ ಕೈಜೋಡಿಸಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿದರು : ಡಿ.ಎಸ್ ಹೂಲಗೇರಿ

ಮಾಡದಿದ್ದರೆ ನೀವೆಲ್ಲಿ ಎಂಎಲ್‌ಸಿ ಆಗ್ತಿದ್ರಿ ಎಂದು ವಾಗ್ದಾಳಿ ನಡೆಸಿದರು.

ನಾಳೆ ಹಟ್ಟಿಗೆ ಸಿಎಂ : ನಾಳೆ (ಅ.06) ತಾಲೂಕಿನ ಹಟ್ಟಿ ಚಿನ್ನದಗಣಿ ಅಭಿವೃದ್ಧಿಗೆ 998 ಕೋಟಿ ರೂಪಾಯಿ ವೆಚ್ಚದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಭೋಸರಾಜು ಚಿನ್ನದಗಣಿ ಅಧ್ಯಕ್ಷ ಜಿ.ಟಿ.ಪಾಟೀಲ್ ಸೇರಿ ಸಂಸದರು. ಜಿಲ್ಲೆಯ ಶಾಸಕರುಗಳು ಆಗಮಿಸುತ್ತಿದ್ದು ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ, ಎಪಿಎಂಸಿ ಅಧ್ಯಕ್ಷ ಅಮರೇಶ ಹೆಸರೂರು, ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ, ಪುರಸಭೆ ಅಧ್ಯಕ್ಷ ಬಾಬುರೆಡ್ಡಿ ಮುನ್ನೂರು, ಪುರಸಭೆ ಸದಸ್ಯ ಮಹಮ್ಮದ್ ರಫಿ, ಲಿಂಗರಾಜ ಹಟ್ಟಿ, ಮುದಕಪ್ಪ ವಕೀಲರು, ಗದ್ದೆನಗೌಡ ಸೇರಿದಂತೆ ಇದ್ದರು

# ವೈಯಕ್ತಿಕ ರಾಜಕೀಯ ಮಾಡಬಾರದು : ಶರಣಗೌಡ ಪಾಟೀಲ್ ಬಯ್ಯಾಪೂರ

ಆದಪ್ಪ ಮನಗೂಳಿ, ಲಾಲಪ್ಪ, ಲಿಂಗಪ್ಪ ಪರಂಗಿ, ರಾಠೋಡ್, ಮಲ್ಲಯ್ಯ ನರಕಲದಿನ್ನಿ, ಪ್ರಕಾಶ ಕುರಿ, ಜಗನ್ನಾಥ, ಶ್ರೀಕಾಂತ ಪಾಟೀಲ್, ಸೋಮಶೇಖರ್ ಐದನಾಳ, ಲಕ್ಷ್ಮಿದೇವಿ, ನಾಗವೇಣಿ, ಚೆನ್ನಾರೆಡ್ಡಿ ಬಿರಾದಾರ, ಎಂ ಜಿಲಾನಿ, ವಿಜಯಕುಮಾರ್ ಕಾಳಾಪೂರ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.

# ಸತ್ಯಂ ಕಾಲೇಜಿನಲ್ಲಿ ಕುವೆಂಪು ವಿಚಾರಕ್ರಾಂತಿ ಕುರಿತು ವಿಚಾರ ಸಂಕಿರಣ

**ಕಲಬುರಗಿ,ಆ.04**–ನಗರದ ಸತ್ಯಂ ಕಾಲೇಜಿನಲ್ಲಿ ಆಯೋಜಿಸಿದ್ದ ಕುವೆಂಪು ವಿಚಾರಕ್ರಾಂತಿ ಕೃತಿಯ ಕುರಿತ ವಿಚಾರ ಸಂಕಿರಣದಲ್ಲಿ ಕಡಗಂಚಿಯ ಕೇಂದ್ರೀಯ ವಿಶ್ವವಿದ್ಯಾಲಯ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೋ.ಕಿರಣ ಗಾಜನೂರ ಅವರು ಉಪನ್ಯಾಸಕರಾಗಿ ಆಗಮಿಸಿ ಭಾರತೀಯ ನೆಲದಲ್ಲಿ ಬುದ್ಧನಿಂದ ಆರಂಭವಾದ ವೈಚಾರಿಕತೆಯನ್ನು ಭಟ್ಟಿ ಇಳಿಸಿ ವರ್ತಮಾನದೊಂದಿಗೆ ಸಂಯೋಜಿಸಿ ನೀಡಿದ್ದಾರೆ ಎಂದು ಹೇಳಿದರು.

ಪ್ರೋ ಬರಗೂರು ರಾಮಚಂದ್ರಪ್ಪನವರು ಸಂಪಾದಿಸಿರುವ ಕೃತಿಯಲ್ಲಿ ಕುವೆಂಪು ಅವರ ಎಂಟು ವೈಚಾರಿಕ ಲೇಖನಗಳಿವೆ. ವಿಚಾರ ಕ್ರಾಂತಿಗೆ ಆಹ್ವಾನ ಎಂಬ ಲೇಖನದಿಂದ ಆರಂಭವಾಗುವ ಕೃತಿಯಲ್ಲಿ ಇಂದಿನ ಸಮಾಜವು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರಗಳನ್ನು ಕುವೆಂಪು ಅವರು ಸೂಚಿಸಿದ್ದಾರೆ ಎಂದು ಅವರು ಹೇಳಿದರು.

ಇನ್ನೋರ್ವ ಉಪನ್ಯಾಸಕರಾಗಿ ಆಗಮಿಸಿದ್ದ ಪತ್ರಗಾರ ಇಲಾಖೆಯ ವಿಭಾಗಿಯ ಕಚೇರಿಯ ಹಿರಿಯ ನಿರ್ದೇಶಕರಾದ ಡಾ. ವೀರಶೆಟ್ಟಿ ಗಾರಂಪಳ್ಳಿಯವರು ಕುವೆಂಪು ಅವರು ಪ್ರತಿಪಾದಿಸಿದ ವಿಚಾರಗಳಿಗೆ ತಕ್ಕಂತೆ ಬದುಕಿದ ಅವರ ಜೀವನದ ಮಹತ್ವದ ಪ್ರಸಂಗಗಳನ್ನು ಅನಾವರಣಗೊಳಿಸಿದರು.

ಇದೇ ಕಾರ್ಯಕ್ರಮದಲ್ಲಿ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಶರಣಪ್ಪ ಸೈದಾಪುರ್, ಡಾ. ಶ್ರೀಶೈಲ್ ಘೂಳಿ, ಚಂದ್ರಶೇಖರ್ ಕಟ್ಟಿಮನಿಯವರು ತಮ್ಮ ಪ್ರತಿಕ್ರಿಯೆ ಮಾತುಗಳನ್ನಾಡಿದರು.

ಭಾರತ ಜ್ಞಾನ ವಿಜ್ಞಾನ ಸಮಿತಿ ಕಲ್ಬುರ್ಗಿ ಇವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಅಧ್ಯಕ್ಷರಾದ




ಶಿವಶರಣಪ್ಪ ಮುಳೆಗಾಂವ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಮುದಾಯ ಕಲಬುರ್ಗಿಯ ಜಿಲ್ಲಾಧ್ಯಕ್ಷರಾದ ಡಾ. ದತ್ತಾತ್ರೆ ಇಕ್ಕಳಕಿಯವರು ಆಶಯ ನುಡಿಗಳನ್ನಾಡಿದರು.

ಸತ್ಯಂ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ ಎಚ್ ನಿರಗುಡಿಯವರು ಉಪಸ್ಥಿತರಿದ್ದರು. ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಸದಸ್ಯರಾದ ನಾಗೇಂದ್ರಪ್ಪ ಅವರಾದಿ, ರಾಜ್ಯ ಸಹ ಕಾರ್ಯದರ್ಶಿಗಳಾದ ರವೀಂದ್ರ ರುದ್ರವಾಡಿ, ಜಿಲ್ಲಾ ಉಪಾಧ್ಯಕ್ಷರಾದ ಉಷಾ ಗೊಬ್ಬುರ್ ಹಾಗೂ ಶ್ರೀಶೈಲ್ ಮಾಡ್ಯಾಳೆ, ಪ್ರಭಾಕರ್ ಸಲಗರೆ, ಡಾ. ರಮೇಶ್ ಮಾಡಿಯಾಳಕರ್, ಕೋದಂಡರಾಮಪ್ಪ ವಸ್ತ್ರ, ಡಿ ವೈ ರಾಜ್ಯಾಧ್ಯಕ್ಷರಾದ ಲವಿತ್ರ ವಸ್ತ್ರದ ಮುಂತಾದವರು ಭಾಗವಹಿಸಿದ್ದರು. ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿಯಾದ ರವಿಚಂದ್ರ ಆತನೂರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಕಾರ್ಯಕ್ರಮವು ಹಾರ ತುರಾಯಿಗಳಿಂದ ಹೊರತಾಗಿ ಕುವೆಂಪು ಅವರ ವೈಚಾರಿಕ ಹಿನ್ನೆಲೆಯಂತೆ ಅತ್ಯಂತ ಸರಳವಾಗಿ ಏರ್ಪಟ್ಟಿತ್ತು.

# ಉಪನ್ಯಾಸಕರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಸಿದಾಗ ಮಾತ್ರ ಯಶಸ್ಸು ಪಡೆಯುವುದಕ್ಕೆ ಸಾಧ್ಯ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಆ.04**–ಪಟ್ಟಣದ ಶಾರದಾ ವಿದ್ಯಾನಿಕೇತನ ಸ್ವತಂತ್ರ ಪದವಿ ಪೂರ್ವ ಕಾಲೇಜ್ ಸಭಾಂಗಣದಲ್ಲಿ ನಡೆದ ಪ್ರಥಮ ಪಿ.ಯು. ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಕಾರ್ಯಕ್ರಮವನ್ನು ಶಾರಾದಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಬಿ ಹೈಂದವಿ ಮಧುಸೂದನ್ ಗುಪ್ತಾಜೀ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಮತ್ತು ಸಮರ್ಪಣಾ ಮನೋಭಾವದಿಂದ ಉಪನ್ಯಾಸಕರ ಮಾರ್ಗದರ್ಶನದಲ್ಲಿ ನಿರಂತರವಾಗಿ ಕಠಿಣ ಅಭ್ಯಾಸ ವನ್ನು ನಡೆಸಿದಾಗ ಮಾತ್ರ ಜೀವನದಲ್ಲಿ ಉನ್ನತವಾದ ಸಾಧನೆಯನ್ನು ತೋರುವುದಕ್ಕೆ ಸಾಧ್ಯವಾಗುತ್ತದೆ ಹಾಗೂ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯ ಎಂದು ತಿಳಿಸಿದರು.



ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಚಂದ್ರಶೇಖರ್ ಹೂಗಾರ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯ ಶಿಕ್ಷಣದ ಜೊತೆಗೆ ಈಗಿನಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿದಾಗ ಮಾತ್ರ ಉನ್ನತ ಶಿಕ್ಷಣ ಪಡೆಯುವುದಕ್ಕೆ ಪ್ರವೇಶ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಹಾಗೂ ಐ.ಎ.ಎಸ್.ಮತ್ತು ಐ.ಪಿ.ಎಸ್, ನಂತಹ ಪರೀಕ್ಷೆಗಳನ್ನು ಯಶಸ್ವಿಯಾಗಿ ಬರೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪಿ.ಯು.ವಾರ್ಷಿಕ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿನಿ ನಿಂಗಮ್ಮ ಹಾಗೂ ಅವರ ಪಾಲಕರನ್ನು ಸನ್ಮಾನಿಸಿ ಗೌರವಿಸಲಾಯಿತು.ಕಾಲೇಜಿನ ಪ್ರಾಂಶುಪಾಲರಾದ ವೀರಭದ್ರಯ್ಯ ಹಿರೇಮಠ ಶಾರಾದ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಕಿಶೋರ್ ಕುಮಾರ ,ಅಧ್ಯಕ್ಷರಾದ ಉಮಾಮಹೇಶ್ವರಿ ಮಧುಸೂದನ್ ಗುಪ್ತಾಜೀ,ಮಂಜುಳಾ ಕಿಶೋರ್ ಕುಮಾರ್ , ಪ್ರೌಢಶಾಲೆಯ ಮುಖ್ಯೋಪಾಧ್ಯಯರಾದ ಬ್ರಹ್ಮ ಕುಮಾರ್ ಕುಲಕರ್ಣಿ ,ಉಪನ್ಯಾಸಕರಾದ ಮಹಾಂತಗೌಡ, ಬಂದೇನವಾಜ್, ಸುರೇಂದ್ರ, ವೀರಭದ್ರಯ್ಯ ಸ್ವಾಮಿ, ಶರಣಬಸವ ಪಾಟೀಲ್, ಮಾರಯ್ಯ ಅರೋಲಿ, ಪಾರ್ವತಿ ಹಿರೇಮಠ ಸೇರಿದಂತೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು

# ಎಂಎಲ್ಸಿ ಬಿಜೆಪಿ ಶಾಸಕರ ಜೊತೆ ಶಾಮೀಲು ಕಾಂಗ್ರೆಸ್ ಅಭ್ಯರ್ಥಿಗಳು ಸೋಲಿಸುವ ಕುತಂತ್ರ : ಗೋವಿಂದ ನಾಯಕ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಆ.04**– ಕಳೆದ 2023ರ ಚುನಾವಣೆಯಲ್ಲಿ ತಾವು ಆಡಿದ ನಾಟಕವನ್ನು ಇಡೀ ಕ್ಷೇತ್ರದ ಜನತೆ ನೋಡಿದ್ದಾರೆ. ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ ಅವರು ಬಿಜೆಪಿ ಶಾಸಕರ ಜೊತೆ ಶಾಮೀಲು ಆಗಿ ಪಕ್ಷದ ಅಭ್ಯರ್ಥಿಗಳನ್ನು ಸೋಲಿಸುವ ಕುತಂತ್ರದ ನಾಟಕವನ್ನು ಮಾಡುತ್ತಿದ್ದಾರೆ ಕೂಡಲೇ ಅದನ್ನು ಬಿಟ್ಟುಬಿಡಿ ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಕ್ಷೇತ್ರದ ಜನ ನಿಮಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಬ್ಲಾಕ್ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ಗೋವಿಂದ ನಾಯಕ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಗಮನ




ಕ್ಕಿಲ್ಲದೇ ಪಟ್ಟಣದಲ್ಲಿ ಪದಗ್ರಹಣ ಸಮಾರಂಭ ಮಾಡಿ ಪಕ್ಷ ಒಡೆಯುವ ಕೆಲಸ ಮಾಡುತ್ತಿದ್ದಾರೆ.

ಎಸ್.ಸಿ. ಮತ್ತು ಎಸ್.ಟಿ. ಸಮುದಾಯದವರು ಪಕ್ಷದ ಉನ್ನತ ಹುದ್ದೆಯಲ್ಲಿರಬಾರದು ಎಂಬ ಉದ್ದೇಶ ಅವರದು, ಶರಣಪ್ಪ ಮೇಟಿ, ಭೂಪನಗೌಡ ಕರಡಕಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದಗ ತುಟಿ ಪಿಟಕ್ ಎನ್ನದ ಎಂಎಲ್‌ಸಿ ಯವರು ಎಸ್.ಟಿ ಜನಾಂಗದ ವ್ಯಕ್ತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿರುವುದನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ. ಆದ್ದರಿಂದ ಇಲ್ಲದ ನಾಟಕಗಳನ್ನು ಆಡುತ್ತಿದ್ದಾರೆ.

ಮೀಸಲು ಕ್ಷೇತ್ರದಲ್ಲಿ ಕಳೆದ ಚುನಾವಣೆಯಲ್ಲಿ ಸೋಲು ಕಂಡ ಡಿ.ಎಸ್. ಹೂಲಗೇರಿಯವರು ನಿರಂತರವಾಗಿ ಪಕ್ಷ ಕಟ್ಟು ಕೆಲಸ ಮಾಡುತ್ತಿದ್ದಾರೆ. ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಲು ವಿಧಾನ ಪರಿಷತ್ತು ಸದಸ್ಯರಾದ ಶರಣಗೌಡ ಪಾಟೀಲ್ ಮೂಗು ತೂರಿಸುವ ಕೆಲಸ ಮಾಡುತ್ತಿದ್ದಾರೆ ಖಾರವಾಗಿ ನುಡಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಮಹಮ್ಮದ್ ರಫಿ, ರುದ್ರಪ್ಪ ಬ್ಯಾಗಿ, ಎಸ್ ಸಿ ಘಟಕದ ಅಧ್ಯಕ್ಷ ಉಮೇಶ ಹುನಕುಂಟಿ, ಮುದಕಪ್ಪ ವಕೀಲರು, ಸಂಜೀವಪ್ಪ ಚಲುವಾದಿ, ಖಾಜಾಹುಸೇನ್ ,ಸಂಗಮೇಶ, ನೀಲಪ್ಪ ಸೇರಿದಂತೆ ಇದ್ದರು.

# ಆಗಸ್ಟ್ 6ರಂದು ಸಮುಚ್ಚಯ ನಿರ್ಮಾಣಕ್ಕೆ ಮುಖ್ಯಮಂತ್ರಿಗಳಿಂದ ಶಂಕುಸ್ಥಾಪನೆ

**ರಾಯಚೂರು,ಆ.04**–ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ವತಿಯಿಂದ ಹಟ್ಟಿ ಗಣಿ ಕಂಪನಿಯ ಸಿಬ್ಬಂದಿ ಹಾಗೂ ಕಾರ್ಮಿಕರ ವಸತಿ ಸಮುಚ್ಚಯ ನಿರ್ಮಾಣದ ಶಂಕುಸ್ಥಾಪನೆ ಸಮಾರಂಭ ಆಗಸ್ಟ್ 6ರ ಮಧ್ಯಾಹ್ನ 12 ಗಂಟೆಗೆ ಹಟ್ಟಿ ಚಿನ್ನದ ಗಣಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು ಘನ ಉಪಸ್ಥಿತಿ ವಹಿಸುವರು.

ಮುಖ್ಯ ಅತಿಥಿಗಳಾಗಿ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಇಲಾಖೆಯ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ, ಲೋಕೋಪಯೋಗಿ ಇಲಾಖೆ ಸಚಿವರಾದ ಸತೀಶ್ ಜಾರಕಿಹೊಳಿ, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್ ಅವರು ಉಪಸ್ಥಿತರಿರುವರು.

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಗೌರವಾನ್ವ ಉಪಸ್ಥಿತಿ ವಹಿಸುವರು.

ಲಿಂಗಸುಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್ ಅವರು ಅಧ್ಯಕ್ಷತೆ ವಹಿಸುವರು.

ಗೌರವಾನ್ವಿತ ಅತಿಥಿಗಳಾಗಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್. ಶಿವರಾಜ ಪಾಟೀಲ್, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ ಅವರು ಉಪಸ್ಥಿತರಿರುವರು.

ವಿಶೇಷ ಆಹ್ವಾನಿತರಾಗಿ ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಚಂದ್ರಶೇಖರ್ ಬಿ.ಪಾಟೀಲ್, ಶರಣಗೌಡ ಪಾಟೀಲ್ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಹಟ್ಟಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಎಂ.ಡಿ. ಸಮ್ದಾನಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ಲಿಂಗಸುಗೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ವೆಂಕಟೇಶ್ ಆರ್.ಗುತ್ತೇದಾರ ಅವರು ಉಪಸ್ಥಿತಿರುವರು.

ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಸರ್ಕಾರದ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಆಮ್ಲಾನ್ ಆದಿತ್ಯ ಬಿಸ್ವಾಸ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಸಮೀರ್ ಶುಕ್ಲಾ, ಕಲಬುರಗಿ ವಿಭಾಗದ ಆಯುಕ್ತರಾದ ಶ್ರೀಮತಿ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ಲೋಕೋಪಯೋಗಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಸಿ.ಸತ್ಯನಾರಾಯಣ, ಹಟ್ಟಿ ಚಿನ್ನದ ಗಣಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕಿ ಆರ್.ಶಿಲ್ಪ, ಕಾರ್ಯನಿರ್ವಾಹಕ ನಿರ್ದೇಶಕರಾದ ಪ್ರಕಾಶ, ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಅಧ್ಯಕ್ಷರಾದ ಮಹಾಂತೇಶ್, ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿಯಾದ ಎಸ್.ಎಂ.ಶಫಿ ಸೇರಿದಂತೆ ಹಟ್ಟಿ ಚಿನ್ನದ ಗಣಿ ಕಂಪನಿಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಮತ್ತು ಕಾರ್ಮಿಕರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ನ.1ರೊಳಗೆ ಬಿಬಿಎಂಪಿ ಕ್ಷೇತ್ರ ವಿಂಗಡಣೆ ಪೂರ್ಣಗೊಳಿಸಲು ಸುಪ್ರೀಂ ಸೂಚನೆ



**ಬೆಂಗಳೂರು,ಆ.4–** ಬಹುನಿರೀಕ್ಷಿತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ನವೆಂಬರ್ 1ರೊಳಗೆ ಪೂರ್ಣಗೊಳಿಸಬೇಕೆಂದು ರಾಜ್ಯ ಚುನಾವಣಾ ಆಯೋಗಕ್ಕೆ ಸುಪ್ರಿಂಕೋರ್ಟ್ ಕಟ್ಟುನಿಟ್ಟಿನ ಸೂಚನೆ ಕೊಟ್ಟಿದೆ.

ಮುಂದುವರೆದ ಅರ್ಜಿ ವಿಚಾರಣೆ ನಡೆಸಿದ ಸುಪ್ರಿಂಕೋರ್ಟ್, ನವೆಂಬರ್ 1ರೊಳಗೆ ಬಿಬಿಎಂಪಿಯ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಅದಾದ ನಂತರ ಕ್ಷೇತ್ರವಾರು ಮತದಾರರ ಪಟ್ಟಿಯನ್ನು ಸಿದ್ದಪಡಿಸಬೇಕೆಂದು ಆಯೋಗಕ್ಕೆ ಸೂಚಿಸಿ ಮುಂದಿನ ಅರ್ಜಿ ವಿಚಾರಣೆಯನ್ನು ನ.3ಕ್ಕೆ ಮುಂದೂಡಿತು.

ಕ್ಷೆ?ತ್ರ ಪುನರ್ ವಿಂಗಡಣೆಗೆ ಕನಿಷ್ಠ 60 ದಿನದಿಂದ 90 ದಿನ ಬೇಕಾಗುತ್ತದೆ. ಹೀಗಾಗಿ ನ್ಯಾಯಾಲಯ ಸ್ವಲ್ಪ ದಿನ ಹೆಚ್ಚಿನ ಸಮಯ ಅವಕಾಶವನ್ನು ನೀಡಬೇಕೆಂದು ಚುನಾವಣಾ ಆಯೋಗದ ಪರ ವಕೀಲ ಕೆ.ಎನ್.ಪಣೀಂದ್ರ ಮನವಿ ಮಾಡಿದರು.

ಆದರೆ ಇದನ್ನು ಒಪ್ಪದ ನ್ಯಾಯಾಲಯ ಪ್ರತಿ ಸಂದರ್ಭದಲ್ಲೂ ಈ ರೀತಿ ಸಬೂಬು ಹೇಳಿಕೊಂಡೇ ಚುನಾವಣೆ ಮುಂದೂಡುತ್ತಾ ಬಂದಿದ್ದೀರಿ. ಇನ್ನು ಸಮಯ ಅವಕಾಶ ಕೊಡಲು ಆಗುವುದಿಲ್ಲ. ನ.1ರೊಳಗೆ ಬಿಬಿಎಂಪಿಯ ಪುನರ್ ವಿಂಗಡಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಮುಂದಿನ ಅರ್ಜಿ ವಿಚಾರಣೆ ವೇಳೆ ಇಲ್ಲಸಲ್ಲದ ಕಾರಣಗಳನ್ನು ಹೇಳಬಾರದೆಂದು ಪೀಠ ಸೂಚನೆ ಕೊಟ್ಟಿತು.

# ಜನಸಂಖ್ಯಾ ಸ್ಫೋಟದಿಂದ ದೇಶಕ್ಕೆ ಆಘಾತಕಾರಿ ಸಮಸ್ಯೆ: ಡಾ.ದಂಡಪ್ಪ ಬಿರಾದಾರ ಕಳವಳ

**ಯುವ ಮಾರ್ಗ ಸುದ್ದಿ**

**ರಾಯಚೂರು,ಆ.4–**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸರ್ಕಾರಿ ಪ್ರೌಢಶಾಲೆ ಉಡಮಗಲ್ ಖಾನಾ ಪುರ ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮ ನಡೆಯಿತು.



ಉಡಮಗಲ್ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ನಡೆದ ಕಾರ್ಯಕ್ರಮವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾಗಿರುವ ಕನ್ನಡ ಕಲಾ ಶಿಕ್ಷಕರಾದ ಡಾ.ದಂಡಪ್ಪ ಬಿರಾದಾರ್ ಅವರು ಸಸಿಗೆ ನೀರು ಹಾಕಿ ಉದ್ಘಾಟಿಸಿ ಮಾತನಾಡಿ, ನಮ್ಮ ದೇಶದ ಜನಸಂಖ್ಯೆಯು ಇದೀಗ 145 ಕೋಟಿಗೆ ತಲುಪುತ್ತಿದೆ. ಈ ಜನಸಂಖ್ಯಾ ಸ್ಫೋಟವನ್ನು ನಿಯಂತ್ರಣ ಮಾಡದಿದ್ದಲ್ಲಿ ಬಹಳಷ್ಟು ಸಮಸ್ಯೆಗಳು ಎದುರಾಗುತ್ತವೆ ಎಂದು ಕಳವಳ ವ್ಯಕ್ತಪಡಿಸಿದರು.

ನವ ದಂಪತಿಯು ಮತ್ತು ವಿದ್ಯಾರ್ಥಿ ಯು ವಜನರು ಈ ಬಗ್ಗೆ ಅರಿಯಬೇಕು. ನಾವಿಬ್ಬರು ನಮಗಿಬ್ಬರು, ಚಿಕ್ಕ ಸಂಸಾರ ಚೊಕ್ಕ ಸಂಸಾರ, ಹೆಣ್ಣಿರಲಿ ಗಂಡಿರಲಿ ಎರಡೇ ಮಕ್ಕಳಿರಲಿ, ಚಿಕ್ಕ ಕುಟುಂಬ ಚೊಕ್ಕ ಕುಟುಂಬ, ಅತಿಯಾದ ಸಂತಾನ ಜೀವನಕ್ಕೆ ಭಾರ; ಮಿತ ಸಂತಾನ ಹೂವಿನ ಹಾರ ಎನ್ನುವಂತಹ ತತ್ವಗಳನ್ನು ಅರಿತು ನಡೆದಲ್ಲಿ ಜನಸಂಖ್ಯೆಯ ನಿಯಂತ್ರಣ ಸಾಧ್ಯವಿದೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯ ಗುರುಗಳಾದ ವೀರೇಶ್ ಅಂಗಡಿ ಮಾತನಾಡಿ, ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಹೊಂದಾಣಿಕೆ ಸಮಸ್ಯೆ ಎದುರಾಗುತ್ತದೆ. ನನಗೆ ಕಮ್ಮಿ, ನಿನಗೆ ಹೆಚ್ಚು ಎನ್ನುವಂತಹ ತರತಮ ಭಾವನೆಗಳು ಉದ್ಭವಿಸುತ್ತವೆ. ಆಸ್ತಿ, ಹಣ, ಗಳಿಕೆಯಂತಹ ಸಮಸ್ಯೆಗಳು ಎದುರಾಗುತ್ತವೆ. ಇದನ್ನು ಪ್ರತಿಯೊಬ್ಬರು ಅರಿತು ಜನಸಂಖ್ಯೆ ನಿಯಂತ್ರಣಕ್ಕೆ ಸಹಕರಿಸಬೇಕು ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ನಾಗರಾಜ್ ಅವರು ಮಾತನಾಡಿ, ಜನಸಂಖ್ಯಾ ಸ್ಫೋಟದ ಪರಿಣಾಮಗಳು, ದೇಶಕ್ಕೆ ಆಗುತ್ತಿರುವ ಅನಾಹುತ ಮತ್ತು ಬೆಳೆಯುತ್ತಿರುವ ಸಮಸ್ಯೆಗಳು. ಜನಸಂಖ್ಯೆ ನಿಯಂತ್ರಣದಿಂದ ದೇಶಕ್ಕೆ ಆಗುತ್ತಿರುವ ಲಾಭಗಳ ಕುರಿತು ವಿದ್ಯಾರ್ಥಿಗಳಿಗೆ ಮಾರ್ಮಿಕವಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಪಾಂಡುರಂಗ ದೇಸಾಯಿ, ನಫೀಸ್ ಅಂಜುಮ್ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

**ನುಡಿಮುತ್ತು ಸ್ಪರ್ಧೆ:** ವಿಶ್ವ ಜನಸಂಖ್ಯಾ ದಿನಾಚರಣೆ ನಿಮಿತ್ತ ಶಾಲೆಯ ವಿದ್ಯಾರ್ಥಿಗಳಿಗೆ ಜನಸಂಖ್ಯೆ ನಿಯಂತ್ರಣದ ನುಡಿಮುತ್ತುಗಳ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿತ್ತು. ವಿದ್ಯಾರ್ಥಿಗಳು ನುಡಿಮುತ್ತುಗಳನ್ನು ಆಕರ್ಷಕವಾಗಿ, ಅಚ್ಚುಕಟ್ಟಾಗಿ, ಸ್ಪಷ್ಟವಾಗಿ ಹೇಳಿ ಅಧಿಕಾರಿಗಳ ಮೆಚ್ಚುಗೆ ಗಳಿಸಿದರು. ವಿದ್ಯಾರ್ಥಿನಿಯರಾದ ಗೀತಾ, ಶೋಭಾ, ಸಿಂಧು ಪ್ರಾರ್ಥಿಸಿದರು. ವಿದ್ಯಾರ್ಥಿನಿ ಭಾವನಾ ಸ್ವಾಗತಿಸಿದಳು. ಪೂರ್ಣಿಮಾ ವಂದಿಸಿದಳು. ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ಹಾಜರಿದ್ದರು.

# ವಿಶ್ವದ ಎಲ್ಲಾ ಸಂಸತ್ತುಗಳ ತಾಯಿ ಅನುಭವ ಮಂಟಪ



**ಕಲಬುರಗಿ.ಆ.4–**12ನೇ ಶತಮಾನದಲ್ಲಿ ಎಲ್ಲಾ ಜಾತಿ, ವರ್ಗ ಮತ್ತು ಧರ್ಮದ ಶರಣರು ಸೇರುತ್ತಿದ್ದ ಅನುಭವ ಮಂಟಪವು ವಿಶ್ವದ ಎಲ್ಲಾ ದೇಶಗಳ ಸಂಸತ್ತುಗಳ ತಾಯಿಯಾಗಿದೆ ಎಂದು ಶರಣಬಸವೇಶ್ವರ ದೇವಸ್ಥಾನ ಆವರಣದ ಶಾಲಾ–ಕಾಲೇಜುಗಳ ನಿರ್ದೇಶಕರಾದ ಡಾ.ನೀಲಾಂಬಿಕಾ ಪೊಲೀಪಾಟೀಲ ಹೇಳಿದರು.

ಅಖಿಲ ಭಾರತ ಶಿವಾನುಭವ ಮಂಟಪ ಶರಣಬಸವೇಶ್ವರ ದೇವಸ್ಥಾನದಲ್ಲಿ ರವಿವಾರ ಶ್ರಾವಣ ಮಾಸದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ವಿಷಯದ ಶೀರ್ಷಿಕೆ ಅಡಿಯಲ್ಲಿ ಬಸವಣ್ಣನವರು ಮತ್ತು ಅನುಭವ ಮಂಟಪ ಎಂಬ ವಿಷಯ ಕುರಿತು ಮಾತನಾಡಿದರು.

ಮ್ಯಾಥ್ಯೂವ್ ಅರ್ನಾಲ್ಡ್ ಹೇಳುವಂತೆ ವಿಶ್ವದ ಪ್ರಥಮ ಸಂಸತ್ತು ಅನುಭವ ಮಂಟಪ, ಬಸವಣ್ಣನವರು ಪ್ರಥಮ ವಿಚಾರವಾದಿ ಎನ್ನುವ ಅವರ ಮಾತು ಸತ್ಯವಾಗಿದೆ. ಬಸವಣ್ಣನವರು ಐತಿಹಾಸಿಕ ಮಹಾಪುರುಷರು ಅವರು ಮಾಡಿದ ಎಲ್ಲ ಕಾರ್ಯಗಳು ಐತಿಹಾಸಿಕ ಸತ್ಯಗಳಾಗಿವೆ. ಅನುಭವ ಮಂಟಪ, ಮಹಾಮನೆ, ಪುರುಷಕಟ್ಟೆ ಇವು ಬಸವಣ್ಣನವರು ಅಂದು ಕಲ್ಯಾಣದಲ್ಲಿ ಸ್ಥಾಪಿಸಿದ ಐತಿಹಾಸಿಕ ನೆಲೆಗಳು. ಇವು ಮೂರು ಗುರು–ಲಿಂಗ–ಜಂಗಮದ ಸ್ವರೂಪಗಳಾಗಿವೆ. ಅನುಭವ ಮಂಟಪ ಗುರುವಾಗಿ ಅಜ್ಞಾನ ಅಳಿಸಿ ಸುಜ್ಞಾನ ಕೊಟ್ಟರೆ, ಮಹಾಮನೆ ಲಿಂಗವಾಗಿ ಸಮಾನತೆ ತತ್ವ ಎತ್ತಿ ಹಿಡಿದು ಇಷ್ಟಲಿಂಗ, ಪ್ರಸಾದ ಮಹತ್ವ ತೋರಿಸಿಕೊಟ್ಟಿತು.

ಪುರುಷಕಟ್ಟೆ ಜಂಗಮವಾಗಿ ನಿರ್ಗತಿಕರ, ಬಡವರ ದುಃಖ ದುಮ್ಮಾನ ಅಳಿಸಿ ಅವರನ್ನ ಕಾಯಕಧಾರಿಗಳಾಗಿಸಿ ಅವರಲ್ಲಿ ನಾಡ ಪ್ರೇಮ ಹೆಚ್ಚಿಸಿತು. ಮಾನವನೊಳಗಿನ ಎಲ್ಲ ಮದಗಳನ್ನು ಅಳಿಸಿ ಅರಿವನ್ನು ಕೊಟ್ಟು ಅವರನ್ನು ಮಹಾಂತರನ್ನಾಗಿ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅನುಭವ ಮಂಟಪದ ಕರ್ತೃ ಬಸವಣ್ಣನವರು. ಅವರು ಜನರೊಳಗಿನ ಭಯ, ಕೀಳರಿಮೆ ಭಾವನೆಗಳನ್ನು ಕಿತ್ತೊಗೆದು ಅವರಿಗೆ ವಿಚಾರ ಮಾಡುವ, ಮಾತನಾಡುವ, ಬರೆಯುವ ಸ್ವಾತಂತ್ರ್ಯ ಕಲ್ಪಿಸಬೇಕಾಗಿತ್ತು. ಅರಿವು ಒದಗಿಸಿಕೊಡಬೇಕೆನ್ನುವ ಸಂಕಲ್ಪ ಮಹಾದಾಶೆಯಾಗಿತ್ತು. ಹೀಗಾಗಿ ಅನುಭವ ಮಂಟಪ ಸ್ಥಾಪಿಸಿದರು. ನೀಲಾಂಬಿಕೆ ತನ್ನೊಂದು ವಚನದಲ್ಲಿ " ಚೆನ್ನಬಸವಣ್ಣನೆಂಬ ಪ್ರಸಾದಿ ಪಡೆದು ಅನುಭವ ಮಂಟಪವನ್ನು ಕಟ್ಟಿ ಅನುಭವ ಮೂರ್ತಿಯಾದನು ನಮ್ಮ ಬಸವಯ್ಯನು" ಎಂದು ಹೇಳುತ್ತಾರೆ.

ಈ ಮಾತಿಗೆ ಅನೇಕ ಜನಪದ ನುಡಿಗಳು ಸಾಕ್ಷಿಗಳಿವೆ. ಈ ಅನುಭವ ಮಂಟಪದ ಘೋಷ ವಾಕ್ಯ 'ಅರಿವೆ ಗುರು' ಇದರ ಮುಖ್ಯ ತತ್ವಗಳು ಸ್ವಾತಂತ್ರ್ಯ, ಸಮಾನತೆ ಮತ್ತು ಸೌಹಾರ್ದತೆಯಾಗಿದೆ. ಇದರ ಮುಖ್ಯ ಗುರಿಗಳು ಭಕ್ತಿ, ಶಕ್ತಿ ಮತ್ತು ಮುಕ್ತಿ. ಅನುಭವ ಮಂಟಪದ ಫಲಶೃತಿಗಳೆಂದರೆ ಕನ್ನಡ ಭಾಷೆಗೆ ಅಮರತ್ವವನ್ನು ತಂದು ಕೊಟ್ಟಿತು. ಕನ್ನಡ ಸಾಹಿತ್ಯದ ಹಿರಿಮೆ ಗರಿಮೆ ಜಗತ್ತಿಗೆ ಎತ್ತಿತೋರಿಸಿತು. ಈ ಅನುಭವ ಮಂಟಪದ ಮೂಲಕ ಅರಿವನ್ನು ಸಂಪಾದಿಸಿ ಆಚಾರವನ್ನು ಅಂಗಗೊಳಿಸಿ 770 ಅಮರಗಣಂಗಳನ್ನು ಅನುಭವ ಮೂರ್ತಿಗಳನ್ನಾಗಿ ಮಾಡಿದರು ಬಸವಣ್ಣ. ಹೀಗಾಗಿ ಅನುಭವ ಮಂಟಪ ಇಡೀ ವಿಶ್ವ ಗುರುವಿನ ಸ್ಥಾನದಲ್ಲಿ ನಿಂತು ಅದರ ಸಂಸ್ಥಾಪಕರಾದ ಬಸವಣ್ಣನವರು ವಿಶ್ವಗುರು ಎನಿಸಿಕೊಳ್ಳುತ್ತಾರೆ ಎಂದು ಹೇಳಿದರು. ನಂತರ ಸಂಚಾಲಕ ಡಾ.ಶಿವರಾಜಶಾಸ್ತ್ರಿ ಹೇರೂರ್ ಮಾತನಾಡಿದರು.

# ತಾಯಿಯ ಎದೆ ಹಾಲು ಅಮೃತಕ್ಕೆ ಸಮ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ ಆಚರಣೆ



**ಯುವ ಮಾರ್ಗ ಸುದ್ದಿ**

**ದೇವದುರ್ಗ,ಆ.4–** ತಾಯಿಯ ಎದೆಹಾಲು ಮಗುವಿಗೆ ಅಮೃತಕ್ಕೆ ಸಮ ಎಂದು ತಾಲೂಕು ಆರೋಗ್ಯ ಅಧಿಕಾರಿ ಡಾ. ಬನದೇಶ್ವರ ಗಬ್ಬೂರು ಹೇಳಿದರು.

ಶನಿವಾರ ತಾಲೂಕು ಸಾರ್ವಜನಿಕ ಆಸ್ಪತ್ರೆ ದೇವದುರ್ಗದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿ. ಹೆರಿಗೆಯಾಗಿ ಅರ್ಧ ಗಂಟೆ ಒಳಗೆ ತಾಯಿಯು ಮಗುವಿಗೆ ಎದೆ ಹಾಲು ಕುಡಿಸುವುದನ್ನು ಪ್ರಾರಂಭಿಸಬೇಕು, ತಾಯಿಯ ಎದೆಹಾಲು ಅಮೃತಕ್ಕೆ ಸಮಾನ, ಮೊದಲು ಮೂರು ದಿನ ಬರುವ ತಾಯಿಯ ಗಿಣ್ಣು ಎದೆ ಹಾಲಿನಲ್ಲಿ ಕೊಲೆಸ್ಟ್ರಾಲ್ ಎಂಬ ಅಂಶವಿದ್ದು ಇದು ಮಗುವಿನಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಆರು ತಿಂಗಳ ತನಕ ತಾಯಿ ಎದೆ ಹಾಲನ್ನು ಬಿಟ್ಟು ಬೇರೆ ಏನನ್ನು ಮಗುವಿಗೆ ಕುಡಿಸಬಾರದು, ಒಂದು ದಿನಕ್ಕೆ ತಾಯಿಯು ಹತ್ತಿರದಿಂದ 12 ಬಾರಿ ಎದೆ ಹಾಲನ್ನು ಕುಡಿಸಬೇಕು ರಾತ್ರಿ ಸಮಯದಲ್ಲಿ ಮಗು ಮಲಗಿದೆ ಎಂದು ಸುಮ್ಮನೆ ಬಿಡದೆ ಎರಡು ತಾಸಿಗಳಿಗೊಮ್ಮೆ ಎಬ್ಬಿಸಿ ಎದೆಹಾಲನ್ನು ಕುಡಿಸಬೇಕು. ನಂತರ ಆರನೇ ತಿಂಗಳಿಂದ ಎರಡು ವರ್ಷದವರೆಗೂ ಮಗುವಿಗೆ ಪೂರಕ ಆಹಾರ ಗಳೊಂದಿಗೆ ಎದೆ ಹಾಲನ್ನು ಮುಂದುವರಿಸಬೇಕು ಎಂದರು. ಎದೆ ಹಾಲನ್ನು ಕುಡಿಸುವುದುದರಿಂದ ಮಗುವಿಗೆ ದೈಹಿಕ ಬೆಳೆವಣಿಗೆ ವೃದ್ಧಿಸುತ್ತದೆ, ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ, ಅಸ್ತಮಾ, ವಾಂತಿಭೇದಿ ಇನ್ನಿತರ ಖಾಯಿಲೆಗಳಿಂದ ರಕ್ಷಿಸುವದಲ್ಲದೆ ತಾಯಿ ಮಗುವಿನ ಭಾಂದವ್ಯವನ್ನು ಹೆಚ್ಚಿಸುತ್ತದೆ ಮತ್ತು ಇದರಿಂದ ಶಿಶು ಮರಣವನ್ನು ತಗ್ಗಿಸಬಹುದು.ತಾಯಿಗೆ ಸ್ತನ ಕ್ಯಾನ್ಸರ್ ನಂತಹ ರೋಗಗಳಿಂದ ದೂರವಿರಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ.ಶಿವುಕುಮಾರ್ ದೇಸಾಯಿ ಮಕ್ಕಳ ತಜ್ಞರು, ಡಾ.ನಿರ್ಮಲಾ ದೇವಿ ವೈದ್ಯಧಿಕಾರಿಗಳು, ಶಿವಪ್ಪ ಭೂಮನಗುಂಡ, ಚನ್ನಬಸಯ್ಯ ಹಿರೇಮಠ್, ಗೀತಮ್ಮ, ಸೋಮಪ್ಪ, ಚಂದ್ರಮಪ್ಪ, ಶೀಲವಂತಯ್ಯ ಸ್ವಾಮಿ, ಸುಲೋಚನಾ, ಸಂಗಮ್ಮ, ವಿಜಯಲಕ್ಷ್ಮಿ, ಸುಲೋಚನಾ, ರಂಗಮ್ಮ, ರವಿ, ರಾಜು, ಹನುಮಂತ,ಆಶಾ ಕಾರ್ಯಕರ್ತೆ ದೀಪಾ,ದೀಪಿಕಾ, ಶಾಂತಮ್ಮ, ನಾಗಮ್ಮ, ಸುಜಾತ, ಶೃತಿ, ರೇಣುಕಾ, ತಾಯಮ್ಮ, ಸುಮಂಗಲ, ಸುಮಿತ್ರಾ, ರಹಿಮ್ಯುನಿಷಾ, ಶಬೀನಾ,ಭೀಮಮ್ಮ, ಶಿವಗಂಗಾ, ರೇಖಾ ಸೇರಿ ದಂತೆ ತಾಯಂದಿರು ಸಾರ್ವಜನಿಕರು ಹಾಜರಿ ದ್ದರು.

# ರೈತರಿಗೆ ಅಗತ್ಯ ಯೂರಿಯಾ ಪೂರೈಕೆ ಮಾಡಿ ಜೆಡಿಎಸ್ ಆಗ್ರಹ

**ಬಳ್ಳಾರಿ,ಆ.4–** ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಅಡಳಿತ ನಡೆಸುತ್ತಿರುವ ಮುಖ್ಯ ಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಲಂಚಗುಳಿತನ, ದುರಾಡಳಿತ ಮತ್ತು ವೈಫಲ್ಯದ ವಿರುದ್ದ ಮತ್ತು ರೈತರಿಗೆ ಅಗತ್ಯವಾದ ಯೂರಿಯಾ ರಸಗೊಬ್ಬರ ನೀಡುವಂತೆ ಆಗ್ರಹಿಸಿ ಇಂದು ನಗರದಲ್ಲಿ ಜೆಡಿಎಸ್ ಪ್ರತಿಭಾನೆ ನಡೆಸಿ ಮನವಿ ಸಲ್ಲಿಸಲಾಯ್ತು.

ರಾಜ್ಯದಲ್ಲಿ ಪೂರ್ವ ಮುಂಗಾರು ಮತ್ತು ಮುಂಗಾರುನಲ್ಲಿ ಉತ್ತಮ ಮಳೆ ಬಿದ್ದು ರೈತರು ಜಮೀನಿನಲ್ಲಿ ಬಿತ್ತನೆ ಮಾಡಿದ್ದು ಈಗಲೂ ಮಾಡುತ್ತಿದ್ದಾರೆ.ಆದರೆ. ರಾಜ್ಯ ಸರ್ಕಾರ ರೈತರಿಗೆ ಅಗತ್ಯವಿರುವ ಯೂರಿಯಾ ರಸ ಗೊಬ್ಬರವನ್ನು ಪೂರೈಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. . ಈ ರಸ ಗೊಬ್ಬರ ಕಾಳಸಂತೆಯಲ್ಲಿ ವರ್ತಕರು ಮನಸೋ ಇಚ್ಚೆ ಬಂದಂತೆ ಹೆಚ್ಚಿನ ಧರದಲ್ಲಿ ಮಾರಾಟ ಮಾಡುತ್ತಿದ್ದಾರೆ.

ರಾಜ್ಯಕ್ಕೆ ಅಗತ್ಯ ಇರುವ ರಸ ಗೊಬ್ಬರಗಳನ್ನು ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಿ ಸಂಪರ್ಕಿಸಿ ಪಡೆಯಲು ರಾಜ್ಯದ ಕಾಂಗ್ರೆಸ್ ವಿಫಲವಾಗಿದೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ 6.8 ಲಕ್ಷ ಟನ್ ರಸ ಗೊಬ್ಬರ ನಿಗದಿ ಮಾಡಿದ್ದು, ಈ ಪೈಕಿ ಕೇವಲ 5.27 ಲಕ್ಷ ಟನ್ ರಸ ಗೊಬ್ಬರ ನೀಡಿರುವುದಾಗಿ ರಾಜ್ಯ ಸರ್ಕಾರ ಆಪಾದನೆ ಮಾಡುತ್ತಿದೆ. ಆದರೆ, ಬಾಕಿಯಿರುವ 1.5 ಲಕ್ಷ ಟನ್ ರಸ ಗೊಬ್ಬರವನ್ನು ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ ತರುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿ ರಾಜ್ಯದ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.ರಾಜ್ಯದ ಕರಾವಳಿ, ಮಲೆನಾಡಿನಲ್ಲಿ ಮುಂಗಾರು ಮಳೆ ಅಬ್ಬರದಿಂದ ಉಂಟಾದ ನೆರೆ ಹಾವಳಿಯಿಂದ ಭಾರಿ ಪ್ರಮಾಣದಲ್ಲಿ ಖಾಸಗಿ ಮತ್ತು ಸಾರ್ವಜನಿಕ ಅಸ್ತಿ–ಪಾಸ್ತಿಗಳಿಗೆ ಅಪಾರ ಹಾನಿ ಉಂಟಾಗಿದೆ. ಆದರೆ, ರಾಜ್ಯ ಸರ್ಕಾರ ನೆರೆ ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ವಿಪತ್ತು ಪರಿಹಾರ ನಿಧಿಯಿಂದ ಅಗತ್ಯ ಅನುದಾನ ನೀಡಿ ನೆರೆ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಸಂಪೂರ್ಣವಾಗಿ ವಿಫಲವಾಗಿದೆ.

ಉಳಿದಂತೆ ಬಯಲು ಸೀಮೆ ಪ್ರದೇಶದಲ್ಲು ಕಳೆದ 6 ವಾರಗಳಿಂದ ಮಳೆ ಕೊರತೆಯಿಂದ ರೈತರು ನಾಟಿ ಮಾಡಿದ ಫಸಲು ಒಣಗುತ್ತಿವೆ, ರಾಜ್ಯ ಸರ್ಕಾರ ಈ ಬಗ್ಗೆ ಎಚ್ಚರ ವಹಿಸಿಲ್ಲ. ಬೆಳೆ ನಷ್ಟಕ್ಕೆ ಸಂಬಂಧಿಸಿದ ಫಸಲು ವಿಮಾ ಕಂಪನಿಗಳಿಂದ ರೈತರಿಗೆ ಪರಿಹಾರ ನೀಡಲು ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಈ ಎಲ್ಲಾ ವೈಫಲ್ಯಗಳಿಂದ ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸಲು ನೈತಿಕವಾಗಿ ಅಧಿಕಾರ ಕಳೆದುಕೊಂಡಿದೆ. ಈ ಹಿನ್ನಲೆಯಲ್ಲಿ ರಾಜ್ಯಪಾಲರು. ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನದೊಂದಿಗೆ ಎಚ್ಚರಿಕೆ ನೀಡಿ, ರೈತರ ಸಮಸ್ಯೆ ಹಾಗೂ ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಹಾಗೂ ಮಳೆ ಅಭಾವದಿಂದ ಫಸಲನ್ನು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತೆ ಮಾಡಬೇಕು ಎಂದು ಮನವಿ ಸಲ್ಲುಸಲಾಯ್ತು. ಪಕ್ಷದ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ, ಲಕ್ಷ್ಮೀಕಾಂತ್ ರೆಡ್ಡಿ ಮೊದಲಾದವರು ಪಾಲ್ಗೊಂಡಿದ್ದರು.

# ಆ. 5ಕ್ಕೆ 8ನೇ ವರ್ಷದ ನಿಮಿತ್ತ ಪ್ರಾರ್ಥನಾ ಕೂಟ

**ಬೀದರ್ ಆ.4–**ಕಿಂಗ್ ಆಫ್ ಹೆವನ್ ಇಂಟರನ್ಯಾಷನಲ್ ಮಿನಿಸ್ಟ್ರಿಸ್ ಬೀದರ್ ಸಭೆಯ ಸಂಸ್ಥಾಪಕರಾದ ರೆವರೆಂಡ್ ಮನೋಜ್ ಪೌಲ್ ಅವರ ಅಧ್ಯಕ್ಷತೆಯಲ್ಲಿ ಸಭೆಯ 8 ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಒಂದು ದಿವಸದ ಪ್ರಾರ್ಥನಾ ಕೂಟ ಏರ್ಪಡಿಸಲಾಗಿದೆ.

ಆಗಸ್ಟ 5 ರಂದು ಮಂಗಳವಾರ ಬೀದರ್ ನಗರದ ಹೈದ್ರಾಬಾದ ರಸ್ತೆಯ ಬಿದ್ರಿ ವೃತ್ತ ಬಳಿಯ ಪಟೇಲ್ ಫಂಕ್ಷನ್ ಹಾಲ್ ನಲ್ಲಿ ಪ್ರಾರ್ಥನಾ ಕೂಟವು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3:30 ಗಂಟೆಯ ವರೆಗೆ, ಹಾಗೂ ಸಾಯಂಕಾಲ 6 ಗಂಟೆಯಿಂದ ರಾತ್ರಿ 10 ಗಂಟೆಯ ವರೆಗೆ ಏರ್ಪಡಿಸಲಾಗಿದೆ.ಈ ಪ್ರಾರ್ಥನಾ ಕೂಟಕ್ಕೆ ಬೆಂಗಳೂರಿ ಕಿಂಗ್



ವಿಕ್ಟೋರಿ ಇಂಟರನ್ಯಾಷನಲ್ ಚರ್ಚನ ರವಿಮನಿ ಪಾಸ್ಟರ್ ಆಗಮಿಸುತಿದ್ದಾರೆ. ಹೀಗಾಗಿ ಸಮಾಜದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರಾರ್ಥನಾ ಕೂಟದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿ ಆಶೀರ್ವಾದ ಪಡೆಯಬೇಕೆಂದು ರೆವರೆಂಡ್ ಮನೋಜ್ ಪೌಲ್ ಮನವಿ ಮಾಡಿದ್ದಾರೆ.ಆಗಸ್ಟ 5 ರಂದು ಬೀದರ್ ನಲ್ಲಿ ನಡೆಯುವ ಪ್ರಾರ್ಥನಾ ಕೂಟದ ಭಿತ್ತಿ ಪತ್ರ ಕೂಡ ಶುಕ್ರವಾರ ಬಿಡುಗಡೆ ಮಾಡಲಾಯಿತು.

# ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಸುಡಾನ್ ವಿದ್ಯಾರ್ಥಿ

**ಕಲಬುರಗಿ,ಆ.04–** ವಿದ್ಯಾಭ್ಯಾಸಕ್ಕೆಂದು ನಗರಕ್ಕೆ 2013ರಲ್ಲಿ ಬಂದಿದ್ದ ಸುಡಾನ್ ದೇಶದ ವಿದ್ಯಾರ್ಥಿ 2016ರಲ್ಲೇ ವೀಸಾ ಅವಧಿ ಮುಗಿದಿದ್ದರೂ ನಗರದಲ್ಲೇ ವಾಸವಾಗಿರುವುದು ಪತ್ತೆಯಾಗಿದ್ದು, ಆತನನ್ನು ಪೊಲೀಸರು ಬೆಂಗಳೂರಿನಲ್ಲಿರುವ ಅಕ್ರಮ ವಲಸಿಗರ ಕೇಂದ್ರಕ್ಕೆ ಕಳುಹಿಸಿದ್ದಾರೆ.

ನಗರದ ಕಾಲೇಜರೊಂದರಲ್ಲಿ ಅಧ್ಯಯನಕ್ಕೆ ಬಂದಿದ್ದ ಅಬುಸಫಿಯನ್ ಹೈದರ್ ಅಹ್ಮದ್ ಅಲಮೀನ್ ಬಂಧಿತ ವಿದ್ಯಾರ್ಥಿ. ಈತನ ವೀಸಾ ಅವಧಿ 2016ರ ನವೆಂಬರ್ 22ಕ್ಕೆ ಮುಗಿದಿತ್ತು. ಅದರೂ ಅಕ್ರಮವಾಗಿ ನೆಲೆಸಿದ್ದ. 8 ವರ್ಷಗಳ ಬಳಿಕ ಸ್ಟೇಶನ್ ಬಜಾರ್ ಪೊಲೀಸ್ ಇನ್‌ಸ್ಪೆಕ್ಟರ್ ಶಕೀಲ್ ಅಂಗಡಿ ಅವರು ತಮ್ಮ ಸಿಬ್ಬಂದಿಯೊಂದಿಗೆ ದೆಹಲಿ ಸಮೀಪದ ಗುರುಗ್ರಾಮ್‌ನಲ್ಲಿ ಪತ್ತೆ ಹಚ್ಚಿದ್ದಾರೆ. ನಂತರ ಬೆಂಗಳೂರಿನ ಪ್ರಾದೇಶಿಕ ವಿದೇಶಿಯರ ನೋಂದಣಿ ಕೇಂದ್ರದೊಂದಿಗೆ ಪತ್ರ ವ್ಯವಹಾರ ನಡೆಸಿದ ಬಳಿಕ ಆತನನ್ನು ಬೆಂಗಳೂರಿಗೆ ಕಳುಹಿಸಲಾಯಿತು ಎಂದು ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ. ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸ್ಟೇಶನ್ ಬಜಾರ್ ಠಾಣೆ ಪಿಎಸ್ಐ ಇಂದಿರವ್ವ, ಸಿಬ್ಬಂದಿ ಅನಿಲಕುಮಾರ್, ಮಂಜುನಾಥ, ಶರಣಬಸಪ್ಪ, ಚನ್ನವೀರೇಶ ಭಾಗವಹಿಸಿದ್ದರು

ಯುವ ಮಾರ್ಗ

ಮಂಗಳವಾರ : 05–08–2025

## ಪ.ಪಂಚಾಯತಿ ಸದಸ್ಯ ಹಾಜಿ ಚೌದ್ರಿ ಅವರಿಂದ ಪೌಷ್ಟಿಕ ಆಹಾರ ವಿತರಣೆ



ಯುವ ಮಾರ್ಗ ಸುದ್ದಿ

**ಸಿರವಾರ, ಆ.04–**ರಾಜ್ಯದಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ಸರ್ಕಾರ ಅಂಗವಾಡಿ ಕೇಂದ್ರಗಳ ಮೂಲಕ ಪೌಷ್ಠಿಕ ಆಹಾರ ನೀಡುತ್ತಿದೆ ಅದನ್ನು ಸೇವನೆ ಮಾಡಿ ಅಪೌಷ್ಟಿಕತೆ ಹೋಗಲಾಡಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಪ.ಪಂಚಾಯತಿ ಸದಸ್ಯ ಹಾಜಿ ಚೌದ್ರಿ ಹೇಳಿದರು.

ಪಟ್ಟಣದಲ್ಲಿರುವ ಅಂಗನವಾಡಿ ಕೇಂದ್ರ ಸಂಖ್ಯೆ 09ರಲ್ಲಿ 0–5 ವರ್ಷದ ಒಳಗಿನ ಮಕ್ಕಳಿಗೆ ಚಿಕ್ಕ ಮಕ್ಕಳಿಗೆ ಪುಷ್ಠಿ ಕಿಶೋರಿಯ–ರಿಗೆ, ಗರ್ಭಿಣಿ ಬಾಣಂತಿಯರಿಗೆ ಪೌಷ್ಠಿಕ ಆಹಾರವನ್ನು ಶನಿವಾರ ವಿತರಣೆ ಮಾಡಿ ಮಾತನಾಡಿದ ಅವರು ಅಪೌಷ್ಟಿಕತೆ ಹೋಗಲಾಡಿಸಲು, ಖನಿಜಾಂಶಯುಕ್ತ ಆಹಾರ, ಕಾಳು ಇನ್ನಿತರ ಪದಾಥ–ರ್*ಗಳನ್ನು ಸರ್ಕಾರ ಉಚಿತವಾಗಿ ನೀಡುತ್ತಿದೆ.

ಅದನ್ನು ಸರಿಯಾಗಿ ವಿತರಣೆ ಮಾಡಬೇಕು. ಫಲಾನುಭವಿಗಳು ಸಹ ಕೇಳಿ ಪಡೆದುಕೊಳಬೇಕು. ಪದಾರ್ಥಗಳನ್ನು ಕಾಳಸಂತೆಯಲ್ಲಿ ಮರಾಟ ಮಾಡಬಾರದು ಎಂದರು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆ ಹನುಮಂತಿ ಸೇರಿದಂತೆ ಇನ್ನಿತರರು ಇದ್ದರು.

## ದುಗನೂರು, ಬಿಚ್ಚಾಲಿ, ಗಿಲ್ಲೇಸೂಗೂರ ಗ್ರಾಮಗಳಲ್ಲಿ ಶಾಸಕರಾದ ಬಸನಗೌಡ ದದ್ದಲ್ ಅವರಿಂದ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಯುವ ಮಾರ್ಗ ಸುದ್ದಿ

**ರಾಯಚೂರು,ಆ.4–** ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರ ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಆಗಸ್ಟ್ 3ರಂದು ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯ ದುಗನೂರು, ಬಿಚ್ಚಾಲಿ, ಗಿಲ್ಲೇಸೂಗುರ ಗ್ರಾಮಗಳಿಗೆ ಭೇಟಿ ನೀಡಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ದುಗನೂರು ಗ್ರಾಮದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮ್ಯಾಕ್ರೋ ಯೋಜನಡಿಯಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ಶ್ರೀ ಮೈಲಾರಲಿಂಗೇಶ್ವರ ಗುಡಿ, ಶ್ರೀ ಕಡಬೂರು ಗುಡಿ, ಶ್ರೀ ಗುಡಿಕಲ್ ಅಲ್ಲಿಪೀರ್ ಮಂದಿರ ನಿರ್ಮಾಣ ಕಾಮಗಾರಿಗಳಿಗೂ ಸಹ ಇದೆ ವೇಳೆ ಶಾಸಕರು ಚಾಲನೆ ನೀಡಿದರು.

ಬಿಚ್ಚಾಲಿ ಗ್ರಾಮದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮ್ಯಾಕ್ರೋ ಅನುದಾನದಡಿಯಲ್ಲಿ ಚರ್ಚ್ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.ಗಿಲ್ಲೇಸೂಗುರ ಗ್ರಾಮಕ್ಕೆ ತೆರಳಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮ್ಯಾಕ್ರೋ ಅನುದಾನದಡಿಯಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಶಾಸಕರು ಶಂಕುಸ್ಥಾಪನೆಯನ್ನು ನೆರವೇರಿಸಿದರು. ಜೊತೆಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ಶ್ರೀ ಮಾರೆಮ್ಮ ಗುಡಿ, ಶ್ರೀ ಗುಡಿಕಲ್ ಅಲ್ಲಿಪೀರ್ ಮಂದಿರ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ಅದೇ ರೀತಿ ಕೆಕೆರಿಬಿಯ ಮ್ಯಾಕ್ರೋ ಯೋಜನೆಯಡಿ ಶ್ರೀ ಮಹರ್ಷಿ ವಾಲ್ಮೀಕಿ ಬುಡಕಟ್ಟು ವಸತಿ ಶಾಲೆಯ 4 ಕೊಠಡಿಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಈ ಸಂಧರ್ಭದಲ್ಲಿ ದೇವಸೂಗುರ ಬ್ಲಾಕ್ ಅಧ್ಯಕ್ಷರು, ದುಗನೂರು, ಬಿಚ್ಚಾಲಿ, ಗಿಲ್ಲೇಸೂಗುರ ಗ್ರಾಮಗಳ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಹಿರಿಯ ಮುಖಂಡರು, ನಾಮ ನಿರ್ದೇಶನ ಸದಸ್ಯರು, ಅಧಿಕಾರಿಗಳು, ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

## ಆಗಸ್ಟ್ 5ರಂದು ನೇರ ಸಂದರ್ಶನ

**ರಾಯಚೂರು,ಆ.04–** ಇಲ್ಲಿನ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ವಿನಿಮಯ ಇಲಾಖೆ ಕಚೇರಿಯಲ್ಲಿ ಆಗಸ್ಟ್ 5ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ವಿಶೇಷ ಚೇತನರಿಗಾಗಿ ನೇರ ಸಂದರ್ಶನ ಆಯೋಜನೆ ಮಾಡಿಲಾಗಿದ್ದು, ಆಸಕ್ತರು ಭಾಗಹಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ನೇರ ಸಂದರ್ಶನವನ್ನು ಎರಡು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆಯೋಜನೆ ಮಾಡಲಾಗಿದ್ದು, ತಮ್ಮ ಕಂಪನಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

18 ರಿಂದ 35 ವರ್ಷಗಳವರೆಗಿನ ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ವಿದ್ಯಾರ್ಹತೆಯ ಅಂಕ ಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ಬಯೋಡಾಟಾ, ಆಧಾರ್ ಕಾರ್ಡ್ ಪ್ರತಿ ಹಾಗೂ ಭಾವಚಿತ್ರಗಳೊಂದಿಗೆ ಆಗಮಿಸಬೇಕು.

ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಈ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ; 08532–231684, 8095125775, 9008211750, 7795195171ಗೆ ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ನವೀನ ಕುಮಾರ್ ಸಂಗೇಪಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯರಮರಸ್ ಆದರ್ಶ ವಿದ್ಯಾಲಯದಲ್ಲಿ 6ನೇ ತರಗತಿಗೆ ಕೌನ್ಸೆಲಿಂಗ್

**ರಾಯಚೂರು,ಆ.04–** ಇಲ್ಲಿನ ಯರಮರಸ್ ಸರ್ಕಾರಿ ಆದರ್ಶ ವಿದ್ಯಾಲಯ 2025–26ನೇ ಸಾಲಿನ 6ನೇ ತರಗತಿ ದಾಖಲಾತಿ ಕೌನ್ಸೆಲಿಂಗ್ ಪ್ರಕ್ರಿಯು ಆಗಸ್ಟ್ 11ರಿಂದ 14ರವರೆಗೆ ಹಮ್ಮಿಕೊಳ್ಳಲಾಗಿದ್ದು, ಅರ್ಹ ಅಭ್ಯರ್ಥಿಗಳು ಭಾಗವಹಿಸುವಂತೆ ಕೋರಲಾಗಿದೆ.

ಸಾಮಾನ್ಯ ವರ್ಗದ ದಾಖಲಾತಿ ಪ್ರಕ್ರಿಯೆವು ಆಗಸ್ಟ್ 11 ಹಾಗೂ 12 ರಂದು ನಡೆಯಲಿದೆ. ಮೀಸಲಾತಿ ವರ್ಗದ ದಾಖಲಾತಿ ಪ್ರಕ್ರಿಯೆವು ಆಗಸ್ಟ್ 13 ಹಾಗೂ 14ರಂದು ನಿಗದಿಪಡಿಸಲಾಗಿದೆ. ನಿಗದಿತ ದಿನಾಂಕದಂದು ಬೆಳಗ್ಗೆ 10 ಗಂಟೆಗೆ ಪೋಷಕರು ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ದಾಖಲಾತಿ ಸಮಯದಲ್ಲಿ ಒದಗಿಸಬೇಕು. ಸಮಯಕ್ಕೆ ಸರಿಯಾದ ದಾಖಲೆಗಳೊಂದಿಗೆ ಹಾಜರಾಗದಿದ್ದಲ್ಲಿ ಅಥವಾ ಗೈರುಹಾಜರಾದಲ್ಲಿ ಮತ್ತೊಮ್ಮೆ ಅವಕಾಶ ನೀಡಲಾಗುವುದಿಲ್ಲ ಎಂದು ಯರಮರಸ್ ಸರ್ಕಾರಿ ಆದರ್ಶ ವಿದ್ಯಾಲಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರ ಜಿಲ್ಲೆಯಲ್ಲಿ ಯೂರಿಯಾ ಡಿಎಪಿ ರಸಗೊಬ್ಬರ ಲಭ್ಯ

**ರಾಯಚೂರು,ಆ.04–**ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಿಂದ 2025–26 ಸಾಲಿನ ಮುಂಗಾರು ಹಂಗಾಮಿಗೆ ಜಿಲ್ಲೆಗೆ ನಿಗದಿಪಡಿಸಿದ ಗುರಿಯಂತೆ ಹಂತ ಹಂತವಾಗಿ ವಿವಿಧ ಸಂಸ್ಥೆಗಳಿಂದ ಯೂರಿಯಾ, ಡಿ.ಎ.ಪಿ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರ ಜಿಲ್ಲೆಗೆ ಬರುತ್ತಿದ್ದು, ರಸಗೊಬ್ಬರದ ಕೊರತೆ ಬಗ್ಗೆ ಆತಂಕ ಪಡುವ ಅವಶ್ಯಕತೆ ಇರುವುದಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ರಸಗೊಬ್ಬರ ವಿತರಕರಿಗೆ ಆಗಸ್ಟ್ 01 ರಂದು ಯೂರಿಯಾ ರಸಗೊಬ್ಬರವನ್ನು ಅನ್ನಪೂರ್ಣೇಶ್ವರಿ ಅಗ್ರೋ ಟ್ರೇಡಿಂಗ್ ಕ್ಯಾಂಪ್ ಬ್ಯಾಗ್ವಾಟ್–9 ಮೆಟ್ರಿಕ್ ಟನ್, ಬಂದೇನವಾಜ್ ಆಂಡ್ ಕಂಪನಿ ಮುಳ್ಳೂರು ಕ್ಯಾಂಪ್–9 ಮೆ.ಟ., ಬಸವೇಶ್ವರ ಕೃಷಿ ದೇವದುರ್ಗ–9, ಭೂಮಿ ಟ್ರೇಡರ್ಸ್ ಸಿರವಾರ–18, ಧನುಷ್ ಆಗ್ರೋ ಏಜೆನ್ಸೀಸ್ ರಾಯಚೂರು26, ಗಣೇಕಲ್ ಬಂಡಿ ವಿರೂಪನ್ ಗೌಡ ಆಗ್ರೋ ಸಿರವಾರ್–18, ಕೆ.ಸತ್ಯನಾ ರಾಯಣ ಆಂಡ್ ಸನ್ಸ್ ಸಿಂಧನೂರು 9, ಕಲ್ಪತರು ವಿಎಸ್ಎಸ್ ಎನ್ ರಾಯಚೂರು–9, ಕೋದಂಡರಾಮ ಟ್ರೇಡರ್ಸ್ ಮಾನ್ವಿ ರಾಯಚೂರು–9, ಮಂಜು ಆಗ್ರೋ ಏಜೆನ್ಸೀಸ್ ರಾಯಚೂರು–26, ಪಿಎಸಿಎಸ್ ಗುಡದೂರು–18, ಪಿಎಸಿಎಸ್ ಹಾಲಾಪುರ–18, ಪಿಎಸಿಎಸ್ ಎನ್.ಹೊಸೂರು ನುಗಡೋಣಿ ಹೊಸುರ–18, ಪಿಎಸಿಎಸ್ ತೋರಣದಿನ್ನಿ–18, ಪ್ರಸನ್ನ ಲಕ್ಷ್ಮಿ ಎಂಟರ್ಪ್ರೈಸಸ್ ರಾಯಚೂರು–13, ಕ್ವಾಲಿಟಿ ಫರ್ಟಿಲೈಜರ್ಸ್ ರಾಯಚೂರು–18, ಆರ್ಎಪಿಸಿಎಮ್ಎಸ್ ರಾಯಚೂರು–26, ಸಾಗರ್ ಎಂಟರ್ಪ್ರೈಸಸ್ ರಾಯಚೂರು–13, ಸಾಯಿರಾಂ ಟ್ರೇಡರಿಂಗ್ ಕಂಪನಿ ಜಾಲಹಳ್ಳಿ–9, ಶ್ರೀ ಕುಮಾರ್ ಎಂಟರ್ಪ್ರೈಸಸ್ ಸಾಯಿ ಕ್ಯಾಂಪ್ ಮಾನ್ವಿ–9, ಶ್ರೀ ಲಕ್ಷ್ಮೀ ಬಾಲಾಜಿ ಟ್ರೇಡಿಂಗ್ ಕಂಪನಿ ಮಾನ್ವಿ–9, ಶ್ರೀ ಮಲ್ಲಿಕಾರ್ಜುನ ಕೃಷಿ ಸೇವಾ ಕೇಂದ್ರ ಜಾಲಹಳ್ಳಿ–9, ಶ್ರೀ ರಾಘವೇಂದ್ರ ಎಂಟರ್ಪ್ರೈಸಸ್ (ಗೊರೆಬ್) ಮಲ್ಕಾಪುರ–9, ಶ್ರೀ ಶಿವ ಸಾಯಿ ಟ್ರೇಡರ್ಸ್ (ಮಾನ್ವಿ) ಸಾಯಿಕ್ಯಾಂಪ್–9, ಶ್ರೀ ವೆಂಕಟರಮಣ ಟ್ರೇಡರ್ಸ್ (ಮಾನ್ವಿ) ಬಿಬಿ ಕ್ಯಾಂಪ್ ನುಗಡೋಣಿ–9, ಶ್ರೀವೆಂಕಟೇಶ್ವರ ಟ್ರೇಡರ್ಸ್ ಗಬ್ಬೂರು–18, ಶ್ರೀನಿವಾಸ ಆಗ್ರೋ ಏಜೆನ್ಸಿ (ಸಿಂಧನೂರು) ಮುದ್ದಾಪುರ ಸಿಂಧನೂರು–9, ಟಿಎಪಿಸಿಎಂಎಸ್ ಮಾನ್ವಿ–18, ಟಿಎಪಿಸಿಎಂಎಸ್ ಸಿಂಧನೂರು–18, ವಿಜಯಲಕ್ಷ್ಮಿ ಆಗ್ರೋ ಏಜೆನ್ಸಿ (ಮಾನ್ವಿ) ಕೆ.ಗುಡುದಿನ್ನಿ ಕ್ಯಾಂಪ–18, ಪಿಎಸಿಎಸ್ ಬುಡಿವಾಲ್–18, ಪಿಎಸಿಎಸ್ ತಿಡಿಗೋಳ –18, ಪಿಎಸಿಎಸ್ ಸಾಲಗುಂದ–18, ಪಿಎಸಿಎಸ್ ಉದ್ಬಾಲ್–18, ಬಸವ ಟ್ರೇಡರ್ಸ್ ದೇವದುರ್ಗ–9, ಧನ ಲಕ್ಷ್ಮಿ ಎಂಟರ್ಪ್ರೈಸಸ್ ರಾಯಚೂರು–6.5, ಗಣೇಶ್ ಟ್ರೇಡರ್ಸ್ ಬಿ.ಬಿ.ಕ್ಯಾಂಪ್–9, ಗಾಯತ್ರಿ ಶ್ರೀ ಆಗ್ರೋ ಟ್ರೇಡರ್ಸ್ (ರಾಯಚೂರು) ರಂಗಾಪುರ ಕ್ಯಾಂಪ್–9, ಸಪ್ತಗಿರಿ ಎಂಟರ್ಪ್ರೈಸಸ್ (ರಾಯಚೂರು) ಯರಮರಸ್–13, ಸತ್ಯನಾರಾಯಣ ರಮೇಶ್ ಬಾಬು ಮಾನ್ವಿ–9, ಶ್ರೀರಾಘವೇಂದ್ರ ಫರ್ಟ್ ಮತ್ತು ಪೆಸ್ಟ್ ಭಾಗ್ಯನಗರ ಕ್ಯಾಂಪ್–9, ಶ್ರೀ ಅಕ್ಷಯ ಟ್ರೇಡರ್ಸ್ ರಾಯಚೂರು–6.5, ಶ್ರೀ ಅಮರೇಶ್ವರ ಟ್ರೇಡರ್ಸ್ ಬಾಗಲವಾಡ–9, ಶ್ರೀಬಸವ ಟ್ರೇಡರ್ಸ್ ಗಬ್ಬೂರು–9, ಶ್ರೀ ದುರ್ಗಾ ಎಂಟರ್ಪ್ರೈಸಸ್ ಗಾಂಧಿ ನಗರ–9, ಶ್ರೀಗೌರಿ ಶಂಕರ್ ಆಗ್ರೋ ಏಜೆನ್ಸೀಸ್ ರಾಯಚೂರು–6.5, ಶ್ರೀಲಕ್ಷ್ಮೀ ವೆಂಕಟೇಶ್ವರ ಗಬ್ಬೂರು–18, ಶ್ರೀಲಕ್ಷ್ಮೀ ಶ್ರೀನಿವಾಸ ಟ್ರೇಡರ್ಸ್ ರಾಯಚೂರು–13.5, ಶ್ರೀಲಕ್ಷ್ಮೀ ವೆಂಕಟೇಶ್ವರ ಕೃಷಿ ಕೇಂದ್ರ ಪೋತ್ನಾಳ್–9, ಶ್ರೀಮಲ್ಲಿಕಾರ್ಜುನ ಟ್ರೇಡರ್ಸ್ ಬಾಗಲವಡ–9, ಶ್ರೀ ರಾಘವೇಂದ್ರ ಎಂಟರ್ಪ್ರೈಸಸ್ ಪೋತ್ನಾಳ್–9, ಶ್ರೀ ಸತ್ಯನಾರಾಯಣ ಟ್ರೇಡರ್ಸ್ ಕವಿತಾಳ–9, ಶ್ರೀಸೂಗೂರೇಶ್ವರ ಟ್ರೇಡರ್ಸ್ ಮಾನ್ವಿ–9, ಶ್ರೀವಿನಾಯಕ ಟ್ರೇಡರ್ಸ್ ಗಾಂಧಿನಗರ–9, ಸೃಷ್ಟಿ ಎಂಟರ್ಪ್ರೈಸಸ್ ಭೋಗಾವತಿ–9, ವರಲಕ್ಷ್ಮಿ ರಸಗೊಬ್ಬರಗಳು ಕವಿತಾಳ–18, ವೀರೇಶ್ವರ ಆಗ್ರೋ ಏಜೆನ್ಸಿ ಗೊರೇಬಾಳ–9, ವೆಂಕಟ್ ಸಾಯಿ ಟ್ರೇಡರ್ಸ್ ಮಾನ್ವಿ–9, ಶ್ರೀಬಾಲಾಜಿ ಎಂಟರ್ಪ್ರೈಸಸ್ ಭೂತಲದಿನ್ನಿ–18, ಶ್ರೀವೆಂಕಟೇಶ್ವರ ಟ್ರೇಡರ್ಸ್ ಬೂದಿಹಾಳ್–27, ಶ್ರೀಸಾಯಿ ಹನುಮಾನ್ ಟ್ರೇಡರ್ಸ್ ಬಾಳೆಗಿಡಕ್ಯಾಂಪ್–18, ಬಸವ ಅಗ್ರೋ ಕೇಂದ್ರ ಚಿಕ್ಕಹೆಸರೂರು–9, ಶ್ರೀ ರಾಘವೇಂದ್ರ ಟ್ರೇಡರ್ಸ್ ಸಿಂಧನೂರು–9, ಶ್ರೀಗಾಯತ್ರಿ ಅಗ್ರೋ ಟ್ರೇಡರ್ಸ್ ರಂಗಾಪುರ ಕ್ಯಾಂಪ –9, ಭಾಗ್ಯಲಕ್ಷ್ಮಿ ಟ್ರೇಡರ್ಸ್–ಭೀಮರಾಜ ಕ್ಯಾಂಪ–9, ಶ್ರೀ ವೀರಭದ್ರೇಶ್ವರ ಏಜೆನ್ಸೀಸ್–ಪೋತ್ನಾಳ್–9, ತಿರುಮಲ್ ಫರ್ಟಿಲೈಸರ್ಸ್ (ರಾಯಚೂರು)–6.5, ಆರ್ಯನ್ ಆಗ್ರೋ ಏಜೆನ್ಸೀಸ್ ದೇವದುರ್ಗ–9, ಶ್ರೀ ಸಂಗಮೇಶ್ವರ ಟ್ರೇಡರ್ಸ್ ಗುರುಗುಂಟಾ–18, ಶ್ರೀರಾಜಲಕ್ಷ್ಮಿ ಟ್ರೇಡರ್ಸ್ ಪೋತ್ನಾಳ್–9, ಅಖಿಲಾ ಏಜೆನ್ಸೀಸ್ ಮಾನ್ವಿ–9, ಸುಬ್ರಹ್ಮಣ್ಯ ಟ್ರೇಡರ್ಸ್ ಕೆ.ಹಂಚಿನಾಳ್ ಕ್ಯಾಂಪ–9, ಶ್ರೀಹುಲಿಗೆಮ್ಮ ದೇವಿ ಟ್ರೇಡರ್ಸ್ ಮುಕ್ಕುಂದ–9, ರಾಮಕೃಷ್ಣ ಗೊಬ್ಬರ ಚಾಗಭಾವಿ ಕ್ಯಾಂಪ–18, ಶ್ರೀ ರಾಜಲಕ್ಷ್ಮಿ ಅಗ್ರೋ ಏಜೆನ್ಸೀಸ್–ಮುಸ್ಟೂರ್–9, ಕಿಸಾನ್ ಮಾಲ್ ರಾಯಚೂರು–6.5, ಶ್ರೀಪ್ರಜ್ಞಾವಿ ಟ್ರೇಡರ್ಸ್ ಶ್ರೀನಿವಾಸ್ ಕ್ಯಾಂಪ್–9, ಶ್ರೀಶರಣಬಸವೇಶ್ವರ ಟ್ರೇಡರ್ಸ್ ಗಬ್ಬೂರು–9, ಯಾಸಿನ್ ಟ್ರೇಡರ್ಸ್ ಜಾಲಹಳ್ಳಿ–9, ಅಕ್ಕಿನ ಆಗ್ರೋ ಏಜೆನ್ಸೀಸ್ ತುರ್ವಿಹಾಲ್–18, ಟಿಎಪಿಎಮ್ಸಿಎಸ್ ಎಫ್ಪಿಒ ಸಿಂಧನೂರು–18, ಪಾರಸ್ ಟ್ರೇಡರ್ಸ್ ಸಿಂಧನೂರು–18, ರಮೇಶ್ ಟ್ರೇಡಿಂಗ್ ಕಂಪನಿ–18, ಸಂದೀಪ್ ಆಗ್ರೋ ಏಜೆನ್ಸೀಸ್–18, ಅಭಯ ಅಗ್ರೋ ಏಜೆನ್ಸೀಸ್–18, ಪಂಚಮುಖಿ ವ್ಯಾಪಾರಿಗಳು ಕಲ್ಲೂರು–18, ಜಿಲಾನಿ ಟ್ರೇಡರ್ಸ್ ಸಾಲಗುಂದಾ–18, ಶರಣ ಶ್ರೀಟ್ರೇಡರ್ಸ್ ವೀರಪಾಪುರ–18, ಸೃಷ್ಟಿ ಎಂಟರ್ಪ್ರೈಸಸ್ ಹೀರೆಕೋಟ್ನೇಕಲ್–18, ಮಲ್ಲಿಕಾರ್ಜುನ್ ಟ್ರೇಡರ್ಸ್ ಬಾಗಲವಾಡ–18, ಮಣಿಕಂಠ ಟ್ರೇಡರ್ಸ್ ಬಾಗಲವಾಡ–18, ಶ್ರೀಶೈಲ್ ಮಲ್ಲಿಕಾರ್ಜುನ ಟ್ರೇಡರ್ಸ್ ಹಂಚಿನಾಳ ಕ್ಯಾಂಪ–18, ಬಸವ ಶ್ರೀಟ್ರೇಡರ್ಸ್ ತುರ್ವಿಹಾಳ–18, ವೆಂಕಟೇಶ್ವರ್ ಫರ್ಟಿಲೈಜರ್ಸ್ ಸಿರವಾರ– 36, ವೀರಭದ್ರೇಶ್ವರ ಫರ್ಟಿಲೈಜರ್ಸ್ ಮಸ್ಕಿ–18, ಲಕ್ಷ್ಮಿ ವೆಂಕಟೇಶ್ವರ ಟ್ರೇಡರ್ಸ್ ಜಂಗಮರಹಳ್ಳಿ–36, ವತ್ಸಾ ಆಗ್ರೋ ಟ್ರೇಡರ್ಸ್ ಗಾಂಧಿ ನಗರ–36, ಲಕ್ಷ್ಮಿ ವೆಂಕಟೇಶ್ವರ ಎಂಟರ್ಪ್ರೈಸೆಸ್ ಗಾಂಧಿನಗರ–36, ಶ್ರೀನಿವಾಸ್ ಅಗ್ರೋ ಏಜೆನ್ಸಿ ಮುದ್ದಾಪುರ–18, ರಾಜಮಠ ಅಗ್ರೋ ಏಜೆನ್ಸಿ ಕೆ ಹಂಚಿನಾಳ ಕ್ಯಾಂಪ–18, ಸಾಯಿ ಹನುಮಾನ್ ಟ್ರೇಡರ್ಸ್ ಬಾಳೆಗಿಡ ಕ್ಯಾಂಪ–36, ರಾಜರಾಜೇಶ್ವರ್ವಾರಿ ಏಜೆನ್ಸಿ 7ನೇ ಮೈಲ್ ಕ್ಯಾಂಪ–18, ಶ್ರೀರಾಮ ಟ್ರೇಡರ್ಸ್ ಬಳಗಾನೂರ–18, ಆಗ್ರೋಸ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಗಂಜಳ್ಳಿ–18, ಶ್ರೀಸೂಗೂರೇಶ್ವರ ಟ್ರೇಡರ್ಸ್ ಪೊತ್ನಾಳ್–18, ಶ್ರೀವೆಂಕಟ್ ಸುರೇಶ್ ಟ್ರೇಡರ್ಸ್ ಬಿಬಿ ಕ್ಯಾಂಪ್–18, ವೆಂಕಟಸಾಯಿ ಟ್ರೇಡರ್ಸ್ ಮಾನ್ವಿ–36, ವೆಂಕಟೇಶ್ವರ ಫರ್ಟ್ ಮತ್ತು ಪೆಸ್ಟ ಸಿರವಾರ–18, ಮೂರ್ತಿ ಎಂಟರ್ಪ್ರೈಸಸ್ ಕವಿತಾಳ–18, ಟಿಎಪಿಸಿಎಂಎಸ್ ದೇವದುರ್ಗ–36, ಪಿಎಸಿಎಸ್ ಗಬ್ಬೂರ್–18, ಎಫ್ಪಿಒ ಪರಿಶ್ರಮ ದೇವದುರ್ಗ–18, ಪಿಎಸಿಎಸ್ ದಿನ್ನಿ–18, ಪಿಎಸಿಎಸ್ ಹುಣಸಿಹಾಳ್ ಹುಡಾ–18, ಒಜಿಸಿಎಸ್ ಕಲಮಾಲ್–18, ಪಿಎಸಿಎಸ್ ಗಿಲ್ಲೆಸಗೂರ್–18, ಟಿಎಪಿಸಿಎಂಎಸ್ ಮಾನ್ವಿ–18, ಒಜಿಸಿಎಸ್ ರಾಜಾಲಬಂಡ–18, ಪಿಎಸಿಎಸ್ ಕುರ್ಡಿ–18, ಪಿಎಸಿಎಸ್ ಕವಿತಾಳ–18, ಪಿಎಸಿಎಸ್ ಹರ್ವಿ–18, ಪಿಎಸಿಎಸ್ ತೋರಣದಿನ್ನಿ–18, ಪಿಎಸಿಎಸ್ ಗವಿಗಟ್ಟು ಆಲ್ದಲ್–18, ಪಿಎಸಿಎಸ್ ಹಿರೇಕೊಟ್ನೆಕಲ್–18, ಟಿಎಪಿಸಿಎಂಎಸ್ ಲಿಂಗಸಗೂರು–18, ಪಿಎಸಿಎಸ್ ಬುಡಿವಾಲ್–18, ಪಿಎಸಿಎಸ್ ತುರ್ವಿಹಾಲ್–18, ಪಿಎಸಿಎಸ್ ಹುಡಾ–18, ಪಿಎಸಿಎಸ್ ಟಿಡಿಗೋಳ–18, ಪಿಎಸಿಎಸ್ ಹರಳಹಳ್ಳಿ–18, ಪಿಎಸಿಎಸ್ ಗಾಂಧಿನಗರ–18, ಪಿಎಸಿಎಸ್ ಸಿಂ ಧನೂರು–18, ಟಿಎಪಿಸಿಎಂಎಸ್ ಸಿಂಧನೂರು–36, ಪಿಎ ಸಿಎಸ್ ಜವಳಗೇರಾ–18 ಮೆಟ್ರೀಕ್ ಟನ್ ಯೂರಿಯಾ ಗೊಬ್ಬರ ವಿತರಿಸಲಾಗಿದೆ.

**108 ಮೆಟ್ರಿಕ್ ಟನ್ ಡಿ.ಎ.ಪಿ ಗೊಬ್ಬರ ವಿತರಣೆ:** ಟಿಎಪಿಸಿಎಂಎಸ್ ದೇವದುರ್ಗ–36, ಪಿಎಸಿಎಸ್ ಗಬ್ಬೂರು–18, ಎಫ್ಪಿಒ ಪರಿಶ್ರಮ ದೇವದುರ್ಗ–9, ಒಜಿಜಿಎಸ್ ರಾಜ ಲಬಂಡಾ–9, ಟಿಎಪಿಸಿಎಂಎಸ್ ಲಿಂಗಸುಗೂರು–18, ಪಿಎಸಿಎಸ್ ಜವಳಗೇರಾ –18 ಮೆಟ್ರೀಕ್ ಟನ್ ಡಿ.ಎ.ಪಿ ಗೊಬ್ಬರ ವಿತರಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಸಹ ರಸಗೊಬ್ಬರ ಜಿಲ್ಲೆಗೆ ಬರುತ್ತದೆ. ರೈತರು ರಸಗೊಬ್ಬರ ಕೊರತೆ ಇದೆ ಎಂದು ಭಾವಿಸದೆ ಬೆಳೆಗೆ ಬೇಕಾಗುವ ಒಟ್ಟು ರಸಗೊಬ್ಬರವನ್ನು ಒಂದೇ ಸಲ ಖರೀದಿಸಲು ಮುಂದಾಗಬಾರದು. ಆಯಾ ಹಂತಕ್ಕೆ ಅವಶ್ಯಕತೆಗನುಗುಣವಾಗಿ ಮಾತ್ರ ಖರೀದಿಸಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುರ್ಕಿಗುಡ್ಡ: ಎಸ್.ಡಿ.ಎಂ.ಸಿ ಅಧ್ಯಕ್ಷರಾಗಿ ವೆಂಕಟೇಶ ರಾಠೋಡ್ ಆಯ್ಕೆ



ಯುವ ಮಾರ್ಗ ಸುದ್ದಿ

**ಸಿರವಾರ, ಆ.04–**ಸಿರವಾರ ತಾಲೂಕಿನ ಮುರ್ಕಿಗುಡ್ಡ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಶಾಲಾ ಸುಧಾರಣಾ ಹಾಗೂ ಮೇಲುಸ್ತುವಾರಿ ಸಮಿತಿಗೆ ನೂತನ ಅಧ್ಯಕ್ಷರಾಗಿ ವೆಂಕಟೇಶ ರಾಠೋಡ್ ಹಾಗೂ ಉಪಾಧ್ಯಕ್ಷರಾಗಿ ಹಂಪಮ್ಮ ಗಂಡ ಗುರೇಶ ಅವರು ಅವಿರೋಧವಾಗಿ ಆಯ್ಕೆಯಾಗಿದ್ದು, ಇನ್ನೂ 18 ಜನರು ಸಮಿತಿಗೆ ನೂತನ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯರಾದ ಅಮರೇಶ ಪವಾರ್, ಬಸನಗೌಡ ನಾಯಕ ಮುರ್ಕಿಗುಡ್ಡ, ಮಾಜಿ ಗ್ರಾ.ಪಂ. ಅಧ್ಯಕ್ಷರಾದ ಯಲ್ಲನಗೌಡ ನಾಯಕ, ಶಾಲೆಯ ಮುಖ್ಯಗುರುಗಳಾದ ರಾಘವೇಂದ್ರ, ಮುಖಂಡರಾದ ಶೇಖರಪ್ಪ ಪವಾರ್, ಸಿದ್ದಪ್ಪ, ವಜ್ರದಯ್ಯ ಸೇರಿದಂತೆ ಪಾಲಕರು ಇದ್ದರು.

## ಸಿರವಾರ ಪ.ಪಂ. ಮುಖ್ಯಾಧಿಕಾರಿಯಾಗಿ ಸುರೇಶ ಅಧಿಕಾರ ಸ್ವೀಕಾರ



ಯುವ ಮಾರ್ಗ ಸುದ್ದಿ

**ಸಿರವಾರ, ಆ.04–**ಸಿರವಾರ ಪಟ್ಟಣ ಪಂಚಾಯತಿಯ ನೂತನ ಮುಖ್ಯಾಧಿಕಾರಿಯಾಗಿ ಸುರೇಶ ಅವರು ಶನಿವಾರ ಅಧಿಕಾರ ಸ್ವೀಕಾರ ಮಾಡಿದರು.

ಈ ಹಿಂದೆ ಕಾರಟಗಿ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರು ಸಿರವಾರ ಪಟ್ಟಣ ಪಂಚಾಯತಿಗೆ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿತ್ತು, ಇಲ್ಲಿನ ಮುಖ್ಯಾಧಿಕಾರಿಯಾಗಿದ್ದ ತಿಮ್ಮಪ್ಪ ಜಗ್ಲಿ ಅವರು ದೇವದುರ್ಗ ಪುರಸಭೆಯ ಹಿರಿಯ ಆರೋಗ್ಯ ಸಂಚಾಲಕರಾಗಿ ವರದಿ ಮಾಡಿಕೊಂಡಿದ್ದಾರೆ.

ಇದೇ ವೇಳೆ ಪ.ಪಂ. ಸದಸ್ಯರಾದ ಅಜೀತಕುಮಾರ ಹೊನ್ನಟಗಿ, ಸಂದೀಪ ಪಾಟೀಲ್ ಅವರು ನೂತನ ಮುಖ್ಯಾಧಿಕಾರಿ ಸುರೇಶ ಅವರಿಗೆ ಸನ್ಮಾನಿಸಿ ಸ್ವಾಗತ ಕೋರಿದರು.

ಈ ಸಂದರ್ಭದಲ್ಲಿ ಸಮುದಾಯ ಸಂಘಟನಾ ಅಧಿಕಾರಿ ಹಂಪಯ್ಯ ಪಾಟೀಲ್, ಸುನೀತಾ ಸೇರಿದಂತೆ ಸಿಬ್ಬಂದಿ ವರ್ಗದವರಿದ್ದರು.

## ಇಂಗ್ಲೆಂಡ್ ವಿರುದ್ಧ ಭಾರತಕ್ಕೆ 6 ರನ್ ಗಳ ರೋಚಕ ಜಯ: ಸರಣಿ ಸಮ

**ಲಂಡನ್,ಆ.04–** ವೇಗದ ಬೌಲರ್ ಮೊಹ್ಮದ್ ಸಿರಾಜ್ ಮಾರಕ ಬೌಲಿಂಗ್ ನೆರವಿನಿಂದ ಆಂಡರ್ ಅನ್ ಗವಾಸ್ಕರ್ ಟೆಸ್ಟ್ ಕ್ರಿಕೆಟ್ ಟ್ರೋಫಿಯ ಅಂತಿಮ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ 6 ರನ್ ಗಳಿಂದ ರೋಚಕ ಜಯ ಸಾಧಿಸಿತು.

ಈ ಅಭೂತ ಪೂರ್ವ ಗೆಲುವಿನೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ ಸರಣಿಯಲ್ಲಿ ಎರಡೂ ತಂಡಗಳು 2–2ರಿಂದ ಸಮಬಲ ಸಾಧಿಸಿದೆ.

ಕನ್ನಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಇಂದು ನಡೆದ ಅಂತಿಮ ಟೆಸ್ಟ್ ಪಂದ್ಯದಲ್ಲಿ ಭಾರತ ನೀಡಿದ್ದ 374 ರನ್ ಗಳ ಸವಾಲನ್ನು ಬೆನ್ನಹತ್ತಿದ ಇಂಗ್ಲೆಂಡ್ 367ರನ್ ಗಳಿಗಡ ಸರ್ವಪತನ ಕಂಡಿತು.

## ವಿಶ್ವ ವಿಕಲಚೇತನರ ದಿನಾಚರಣೆ: ಪ್ರಶಸ್ತಿಗೆ ಅರ್ಜಿ ಆಹ್ವಾನ

**ರಾಯಚೂರು,ಆ.04–**ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ಪ್ರತಿ ವರ್ಷದಂತೆ ಈ ವರ್ಷವೂ 2025ರ ಡಿಸೆಂಬರ್ 3ರಂದು ನಡೆಯುವ ವಿಶ್ವ ವಿಕಲಚೇತನರ ದಿನಾಚರಣೆ–2025ರ ಅಂಗವಾಗಿ ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿ ನೀಡುತ್ತಿದ್ದು, ಜಿಲ್ಲೆಯ ಸಾಧಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು, ಅರ್ಜಿ ನಮೂನೆಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಆಜಾದ ನಗರ, ರಾಯಚೂರು ಇವರ ಕಚೇರಿ ದೂರವಾಣಿ ಸಂಖ್ಯೆ 08532–200992 ಇವರಿಂದ ಅರ್ಜಿ ಪಡೆದು ಅಕ್ಟೋಬರ್ 10ರೊಳಗಾಗಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ. ತಡವಾಗಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಗಸ್ಟ್ 6ರಂದು ರಾಯಚೂರು ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳ ಪ್ರವಾಸ

**ರಾಯಚೂರು,ಆ.04–** ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಆಗಸ್ಟ್ 6ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಹೆಚ್ಎಎಲ್ ವಿಮಾನ ನಿಲ್ದಾಣದಿಂದ ನಿರ್ಗಮಿಸಿ 11.20ಕ್ಕೆ ಕೊಪ್ಪಳ ಜಿಲ್ಲೆಯ ಗಿಣಿಗೇರಾ ಏರ್ ಸ್ಟ್ರಿಪ್ ಗೆ ಆಗಮಿಸುವರು.

11.30ಕ್ಕೆ ಗಿಣಿಗೇರಾ ಏರ್ ಸ್ಟ್ರಿಪ್ ನಿಂದ ನಿರ್ಗಮಿಸಿ, ಮಧ್ಯಾಹ್ನ 12.5ಕ್ಕೆ ಲಿಂಗಸೂರ ತಾಲೂಕಿನ ಹಟ್ಟಿಯ ಕೇಂದ್ರೀಯ ವಿದ್ಯಾಲಯ ಆವರಣದಲ್ಲಿನ ಹೆಲಿಪ್ಯಾಡಗೆ ಆಗಮಿಸುವರು. ಬಳಿಕ ಹಟ್ಟಿ ಚಿನ್ನದ ಗಣಿ ಕ್ರೀಡಾಂಗಣದಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದಿಂದ ನಡೆಯುವ ಹಟ್ಟಿ ಚಿನ್ನದ ಗಣಿ ಕಂಪನಿಯ ಸಿಬ್ಬಂದಿ ಹಾಗೂ ಕಾರ್ಮಿಕರ ವಸತಿ ಸಮುಚ್ಚಯ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗಿಯಾಗುವರು.

ಸಂಜೆ 4 ಗಂಟೆಗೆ ಹಟ್ಟಿಯ ಕೇಂದ್ರೀಯ ವಿದ್ಯಾಲಯ ಆವರಣದ ಹೆಲಿಪ್ಯಾಡನಿಂದ ಹೊರಟು ಕೊಪ್ಪಳ ಜಿಲ್ಲೆಯ ಗಿಣಿಗೇರಾ ಏರಸ್ಟ್ರಿಪ್ ಮಾರ್ಗವಾಗಿ ಬೆಂಗಳೂರಿನತ್ತ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳಾದ ಕೆ.ಚಿರಂಜೀವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H